www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–09 ಸೆಪ್ಟಂಬರ್2015
Volume : IX Issue : 09 September 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಡಿಜಿಎಮ್ ಬೇತೇಲ್ ಅಂಕಣ
3. ಮೋಕ್ಷಲೋಕ
4. ಆರೋಗ್ಯ ಸ್ವರ
5. ಸ್ಥಳೀಯ ಮತ್ತು ವಿದೇಶ ಸುದ್ದಿ
6. ಪ್ರಾರ್ಥನಾ ಮನವಿಗಳು
7. ನೀತಿವಂತನ ಆಶೀರ್ವಾದಗಳು
8. ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು :–
9. ಸಾಕ್ಷಿಯ ಸ್ವರ
10. ಮಹಿಳೆಯರ ಸ್ವರ
11. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕ್ರಿಸ್ತನಲ್ಲಿ ಪ್ರೀತಿಯ ಸಹೋದರ/ಸಹೋದರಿ ನಿಮ್ಮೆಗೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

ಈ ವರ್ಷದ ಅಂತ್ಯದ ದಿನಗಳಿಗೆ ನಾವು ಬಂದಿರುತ್ತೇವೆ. ದಿನಗಳು ವೇಗವಾಗಿ ಓಡಿ ಹೋಗುತ್ತಿದ್ದೆ, ಲೋಕದಲ್ಲಿ ನಡೆಯುವ ಘಟನೆಗಳನ್ನು ನಾವು ನೋಡುವಾಗ ಯೇಸುಕ್ರಿಸ್ತನ ಬರೋಣವು ಹತ್ತಿರವಿದೆ ಎಂಬುದಾಗಿ ನಾವು ತಿಳಿದುಕೊಳ್ಳಬಹುದು. ಇನ್ನೂ ಸುವಾರ್ತೆಯು ತಲುಪದಂತಹ ಅನೇಕ ಗ್ರಾಮಗಳಿವೆ ಮತ್ತು ವ್ಯಕ್ತಿಗಳಿದ್ದಾರೆ, ಅನೇಕ ಸೇವಕರು ಆತ್ಮಭಾರವಿಲ್ಲದೆ ಸಮಯವನ್ನು ಸುಮ್ಮನೆ ಕಳೆಯುತ್ತಿದ್ದಾರೆ ಆದಕಾರಣ ಆತ್ಮಭಾರವನ್ನು ಹೊಂದಿಕೊಂಡು ಅದಷ್ಟು ಜನರನ್ನು ಕ್ರಿಸ್ತನ ಬಳಿಗೆ ನಡೆಸಬೇಕಾಗಿದೆ. ಯೆಶಾ. 6:8 ರಲ್ಲಿ ಕರ್ತನು ಯೆಶಾಯನನ್ನು ನೋಡಿ ಹೇಳಿದನು, ನನಗಾಗಿ ಹೋಗುವವರು ಯಾರು ಎಂದು ಕರ್ತನು ನಿನ್ನನ್ನು ನೋಡಿ ಕರೆಯುತ್ತಿದ್ದಾನೆ. ನಿನ್ನ ಅನುದಿನದ ಕೆಲಸ ಮಾಡುತ್ತಿದ್ದಾಗೆಯೇ ಸುವಾರ್ತೆ ಸೇವೆಯನ್ನು ಕೂಡ ಮಾಡಲು ಸಾಧ್ಯ. ಯೇಸುಕ್ರಿಸ್ತನು ಹೇಳಿದನು, ಯೋಹಾ. 4:34ರಲ್ಲಿ ನನ್ನ ತಂದೆಯ ಚಿತ್ತವನ್ನು ಮಾಡುವುದೇ ನನಗೆ ಆಹಾರವು. ತಂದೆಯ ಅನೇಕ ಚಿತ್ತಗಳಲ್ಲಿ ಒಂದು ಚಿತ್ತ ನಶಿಸಿ ಹೋಗುತ್ತಿರುವ ಆತ್ಮಗಳನ್ನು ರಕ್ಷಿಸುವಂತದ್ದು. ಸಹೋದರ/ಸಹೋದರಿಯರೇ ಇವತ್ತು ಈ ಭಾರವನ್ನು ಹೊಂದಿಕೋ ಆತ್ಮಗಳ ಬಳಿಗೆ ಹೋಗಲು ಸಿದ್ಧನಾಗು. ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ವ್ಯರ್ಥವಾಗುವುದಿಲ್ಲ ಅದಕ್ಕೆ ಪ್ರತಿಫಲ ಇದೆ ಎಂಬುದಾಗಿ ದೇವರ ವಾಕ್ಯ ಹೇಳುತ್ತದೆ. (1 ಕೊರಿ. 15:58).

ಯೋಹಾ. 12:26 ಹೇಳುತ್ತದೆ, ಯಾವನಾದರೂ ನನ್ನ ಸೇವೆ ಮಾಡಿದರೆ ನನ್ನ ತಂದೆಯು ಅವನಿಗೆ ಬಹುಮಾನ ಕೊಡುತ್ತಾನೆ. ದಾವೀದನು ಕರ್ತನ ಹೃದಯವನ್ನು ತಿಳಿದಿದ್ದನು (ಅ.ಕೃ. 13:22). ನೀನು ಕರ್ತನ ಹೃದಯುವನ್ನು ತಿಳಿದು ಮುಂದಕ್ಕೆ ಬಾ. (ಮತ್ತಾ. 28:16-20). ಕರ್ತನು ನಿನ್ನ ಕೂಡ ಸದಾ ಇರುವನು.

ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ. ಕರ್ತನು ನಿಮ್ಮನ್ನು ಬಲಪಡಿಸಲಿ ಆತನ ನಿಜವಾದ ಸೇವೆಯನ್ನು ಮಾಡುವಂತೆ ಕರ್ತನು ನಿಮ್ಮೆಲ್ಲರಿಗೂ ಆತ್ಮಭಾರ ನೀಡಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

"ನನ್ನ ಸಹೋದರರೇ, ಬೋಧಕರಾದ ನಮಗೆ ಕಠಿನವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ" (ಯಾಕೋ. 3:1). ಕಳೆದ ಕೆಲವು ವರ್ಷಗಳ ಹಿಂದೆ ನಾನು ದುಬೈ ದೇಶಕ್ಕೆ ಹೋದಾಗ ಒಬ್ಬ ದೊಡ್ಡ ಸಭೆಯ ಸಭಾಪಾಲಕರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಅವರು ನನ್ನ ಬಳಿ ನೀವು ಅನೇಕ ದೇಶಗಳಿಗೆ ಸಂಚರಿಸಿ ಸೇವೆ ಮಾಡುತ್ತಿರಲ್ಲ, ಎಲ್ಲಾ ದೇಶಗಳಲ್ಲಿ ನಿಮಗೆ ಏನು ವಿಶೇಷತೆ ಕಂಡಿತು ಎಂದು ಕೇಳಿದರು ನಾನು ಅದಕ್ಕೆ ಅವರಿಗೆ ಗಲ್ಫ್ ರಾಷ್ಟ್ರಗಳಲ್ಲಿ ವಿಶ್ವಾಸಿಗಳು ಕಡಿಮೆ ಇದ್ದಾರೆ, ಸೇವಕರು ಜಾಸ್ತಿ ಇದ್ದಾರೆ ಎಂದು ಹೇಳಿದೆ. ಪ್ರಿಯ ದೇವ ಸೇವಕರೇ, ನಾವು ನಮ್ಮ ವಶಕ್ಕೆ ದೇವರು ಕೊಟ್ಟಿರುವ ವಿಶ್ವಾಸಿಗಳಿಗೆ ಸರಿಯಾದ ರೀತಿಯಲ್ಲಿ ಉಪದೇಶಿಸದೆ ಹೋದರೆ ದೇವರ ಕಠಿಣವಾದ ತೀರ್ಪಿಗೆ ಒಳಗಾಗಬೇಕಾಗುತ್ತದೆ ಎಂದು ಮರೆಯಬೇಡಿ. ಇಂದು ದೇವರು ದು:ಖದಲ್ಲಿ ಯಾಕೆ ಇದ್ದಾನೆ ಗೊತ್ತೋ? ತನ್ನ ಜನರು ಜ್ಞಾನಹೀನರಾಗಿ ನಾಶವಾಗಿ ಹೋಗುವ ಕಾರಣ. ಇನ್ನು ಮುಂದೆ ಆದರೂ ಫಲಭರಿತವಾದ ದೇವರ ಸೇವೆಮಾಡಿ ದೇವರ ಮೆಚ್ಚುಗೆಯನ್ನು ಪಡೆದುಕೊಳ್ಳೋಣ.

1) ಅದಕ್ಕೆ ಯೇಸು ಉತ್ತರವಾಗಿ ಅವರಿಗೆ ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ (ಮತ್ತಾ. 22:29).
2) ಆದಕಾರಣ ನನ್ನ ಜನರು ಜ್ಞಾನ ಹೀನರಾಗಿ ಸೆರೆಗೆ ಹೋಗುವುದು ಖಂಡಿತ. (ಯೆಶಾ. 5:13).
3) ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ; ನೀವು ಜ್ಞಾನವನ್ನು ತಳ್ಳಿಬಿಟ್ಟದರಿಂದ ಇನ್ನು ನನಗೆ ಯಾಜಕ ಸೇವೆ ಮಾಡದಂತೆ ನಾನು ನಿಮ್ಮನ್ನು ತಳ್ಳಿ ಬಿಡುವೆನು; ನೀವು ನಿಮ್ಮ ದೇವರ ಧರ್ಮೋಪದೇಶವನ್ನು ಮರೆತ ಕಾರಣ ನಾನು ನಿಮ್ಮ ಸಂತತಿಯವರನ್ನು ಮರೆಯುವೆನು (ಹೋಶೆ. 4:6).
4) ಮೂಢರು ತಮ್ಮ ಉದಾಸೀನತೆಯಿಂದಲೇ ಹತರಾಗುವರು; ಜ್ಞಾನಹೀನರು ತಮ್ಮ ನಿಶ್ಚಿಂತೆಯಿಂದಲೇ ನಾಶವಾಗುವರು (ಜ್ಞಾನೋ. 1:32).
5) ಸದುಪದೇಶದ ಕೊರತೆಯಿಂದಲೇ ಸಾಯುವನು ತನ್ನ ಅತೀ ಮೂರ್ಖತನದಿಂದ ಭ್ರಾಂತನಾಗುವನು (ಜ್ಞಾನೋ. 5:23).

ದೇವ ಸೇವಕರು ಉಪದೇಶವನ್ನು ಸರಿಯಾದ ರೀತಿಯಲ್ಲಿ ಉಪದೇಶಿಸುವುದಾದರೆ ನಾಶವಾಗುವಂತಹ ಎಷ್ಟೋ ಆತ್ಮಗಳನ್ನು ರಕ್ಷಿಸಲು ಸಾಧ್ಯ.

"ನನ್ನ ಮಗನೇ ನೀನು ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಿಂದ ಬಲ ಹೊಂದಿದವನಾಗು; ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು" (2 ತಿಮೊ. 2:1–2).

"ಸ್ವಸ್ಥ ಬೋಧನೆಯಿಂದ ಜನರನ್ನು ಎಚ್ಚರಿಸುವುದಕ್ಕೂ ಎದುರಿಸುವವರ ಬಾಯಿ ಕಟ್ಟುವುದಕ್ಕೂ ಶಕ್ತನಾಗಿರುವಂತೆ ಕ್ರಿಸ್ತಬೋಧನಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದು ಕೊಂಡವನಾಗಿರಬೇಕು" (ತೀತ. 1:9).

"ನೀಚಲಾಭವನ್ನು ಹೊಂದುವದಕ್ಕಾಗಿ ಮಾಡಬಾರದ ಉಪದೇಶವನ್ನು ಮಾಡಿ ಕುಟುಂಬ ಕುಟುಂಬಗಳನ್ನೇ ಹಾಳುಮಾಡುತ್ತಾರಾದದ್ದರಿಂದ ಅವರ ಬಾಯಿ ಮುಚ್ಚಿಸ ಬೇಕಾಗಿದೆ" (ತೀತ. 1:11).

"ಈ ಸಾಕ್ಷಿಯು ನಿಜವೇ. ಆದಕಾರಣ ಅವರು ಯೆಹೂದ್ಯರ ಕಲ್ಪನಾಕಥೆಗಳಿಗೂ ಸತ್ಯಭ್ರಷ್ಟರಾದ ಮನುಷ್ಯರ ವಿಧಿಗಳಿಗೂ ಲಕ್ಷ್ಯಕೊಡದೆ ಕ್ರಿಸ್ತನಂಬಿಕೆಯಲ್ಲಿ ಸ್ವಸ್ಥಚಿತ್ತರಾಗಿರುವಂತೆ ಅವರನ್ನು ಕಠಿಣವಾಗಿ ಖಂಡಿಸು" (ತೀತ. 1:13–14).

"ನೀನೇ ಮಾದರಿಯಾಗಿರು. ನೀನು ಮಾಡುವ ಉಪದೇಶದಲ್ಲಿ ಯಥಾರ್ಥತ್ವವೂ ಗೌರವವೂ ಆಕ್ಷೇಪಣೆಗೆ ಆಸ್ಪದವಿಲ್ಲದಂಥ ಸ್ವಸ್ಥಬುದ್ಧಿಯೂ ಇರಬೇಕು; ಆಗ ನಮ್ಮನ್ನು ಎದುರಿಸುವವರು ನಮ್ಮ ವಿಷಯದಲ್ಲಿ ಕೆಟ್ಟದ್ದೇನೂ ಹೇಳುವದಕ್ಕೆ ಅವಕಾಶವಿಲ್ಲದೆ ನಾಚಿಕೊಳ್ಳುವರು" (ತೀತ. 2:7–8).

।) ಉಪದೇಶ ಯಾಕೆ ಬೇಕು ? "ನಾನು ಜ್ಞಾನಮಾರ್ಗವನ್ನು ಉಪದೇಶಿಸಿ ಧರ್ಮಮಾರ್ಗದಲ್ಲಿ ನಿನ್ನನ್ನು ನಡಿಸುವೆನು" (ಜ್ಞಾನೋ. 4:11). ನಾವು ದೈವೀಕ ಜ್ಞಾನವನ್ನು ಹೊಂದಿ ಧರ್ಮಮಾರ್ಗದಲ್ಲಿ ಸರಿಯಾದ ಮಾರ್ಗದಲ್ಲಿ, ನೀತಿಯ ಮಾರ್ಗದಲ್ಲಿ ನಡೆಯಬೇಕಾದರೆ ನಮಗೆ ಉಪದೇಶ ಬೇಕು.

ನಿನ್ನ ಕಾರ್ಯಗಳನ್ನೆಲ್ಲಾ ಧ್ಯಾನಿಸುವೆನು; ನಿನ್ನ ಪ್ರವರ್ತನೆಗಳನ್ನು ಸ್ಮರಿಸುವೆನು (ಕೀರ್ತ. 77:12).

ಒಂದು ದೇಶದಲ್ಲಿ ರಾಜ ಮತ್ತು ರಾಣಿ ಇದ್ದರು. ಅವರಿಗೆ ಮದುವೆಯಾಗಿ ಹಲವಾರು ವರ್ಷಗಳಾದರೂ ಮಕ್ಕಳಾಗಿರಲಿಲ್ಲ ಕೊನೆಗೆ ಅವರು ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ ನಾವು ಒಂದು ಮಗುವನ್ನು ದತ್ತು ಸ್ವೀಕಾರ ಮಾಡಿಕೊಳ್ಳೋಣ ಎಂದು. ತಾವು ದತ್ತು ತೆಗೆದುಕೊಳ್ಳುವಂತಹ ಮಗು ಅನಾಥವಾಗಿರಬೇಕೆಂದು ಅವರು ತೀರ್ಮಾನ ತೆಗೆದುಕೊಂಡು ಒಂದು ದಿನ ವೇಷ ಮಾರ್ಪಡಿಸಿ ಪಟ್ಟಣದ ಬೀದಿಗೆ ಬರುತ್ತಾರೆ ಅಲ್ಲಿ ಅನೇಕ ಅನಾಥ ಭಿಕ್ಷುಕ ಮಕ್ಕಳು ಆಟವಾಡಿಕೊಂಡಿರುತ್ತಾರೆ. ರಾಜ, ರಾಣಿ ಅದರಲ್ಲಿ ಒಂದು ಮಗುವನ್ನು ಮೆಚ್ಚಿ ಅರಮನೆಗೆ ತೆಗೆದುಕೊಂಡು ಬರುತ್ತಾರೆ. ನೇಮಕ ಮಾಡಿದ ದಿನದಲ್ಲಿ ಅರಮನೆಯಲ್ಲಿ ದೊಡ್ಡ ದೊಡ್ಡ ಗಣ್ಯವ್ಯಕ್ತಿಗಳನ್ನು ಕೂಡಿಸಿ ದತ್ತು ಸ್ವೀಕಾರದ ಕ್ರಮಗಳನ್ನು ನೆರವೇರಿಸುತ್ತಾನೆ. ಈಗ ಬೀದಿ ಬದಿಯಲ್ಲಿದ್ದಂತಹ ಮಗು ಅರಮನೆಗೆ ಬಂತು. ರಾಜನು ಕೆಲವು ದಿನ ಮಗುವನ್ನು ಸೂಕ್ಷ್ಮವಾಗಿ ಗಮನಿಸುತ್ತಾನೆ. ಬೀದಿ ಬದಿಯಿಂದ ಅರಮನೆಗೆ ರಾಜಕುಮಾರನಾಗಿ ಬಂದ ಮಗು ಊಟ ಮಾಡುವಾಗ ಅನ್ನ ಚೆಲ್ಲುತ್ತಾ ಇದೆ, ವಾರಕ್ಕೊಮ್ಮೆ ಸ್ನಾನ ಮಾಡುತ್ತಿದ್ದಾನೆ, ಬಟ್ಟೆಗಳನ್ನು ಬದಲಾಯಿಸಿಕೊಳ್ಳುವದಿಲ್ಲ, ಹಿರಿಯರ ಮತ್ತು ಮಂತ್ರಿಗಳ ಜೊತೆ ಶಿಸ್ತು ಇಲ್ಲದೆ ಒಟ್ಟಾರೆ ಮಾತನಾಡುತ್ತಾ ಇದೆ, ಭಾಷಣ ಮಾಡಲು ಗೊತ್ತಿಲ್ಲ ಇದನ್ನೆಲ್ಲ ನೋಡಿದ ರಾಜನಿಗೆ ತುಂಬಾ ಬೇಸರವಾಗುತ್ತದೆ. ನನ್ನ ಮಗ ಬೀದಿ ಬದಿಯಿಂದ ಅರಮನೆಗೆ ಬಂದು ರಾಜಕುಮಾರನನಾದರೂ ರಾಜಕುಮಾರನ ಹಾಗೆ ಜೀವಿಸುತ್ತಿಲ್ಲ, ಇನ್ನು ಬೀದಿ ಬದಿಯಲ್ಲಿ ಜೀವಿಸುವ ಹಾಗೆ ಜೀವಿಸುತ್ತಿದ್ದಾನೆ. ಆಗ ರಾಜನು ನನ್ನ ಮಗನಿಗೆ ರಾಜಕುಮಾರನ ಹಾಗೆ ಜೀವಿಸಲು ನಾನು ಕಲಿಸುತ್ತೇನೆ ಎಂದು ತೀರ್ಮಾನಿಸಿ ಹೇಗೆ ಊಟ ಮಾಡಬೇಕು, ಹೇಗೆ ದಿನಾಲೂ ಸ್ನಾನಮಾಡಿಕೊಳ್ಳಬೇಕು, ಹೇಗೆ ದಿನಾಲೂ ಬಟ್ಟೆ ಬದಲಾಯಿಸಬೇಕು, ಹೇಗೆ ಮಾತನಾಡಬೇಕು ಎಲ್ಲವನ್ನು ಕಲಿಸಿದನು. ಸ್ವಲ್ಪ ದಿನಗಳಲ್ಲಿ ಹುಡುಗನು ರಾಜಕುಮಾರನ ಹಾಗೆ ನಡೆಯಲು ಆರಂಭಿಸಿದನು. ಅದೇ ರೀತಿಯಲ್ಲಿ ಕ್ರಿಸ್ತನಲ್ಲಿ ಬರುವುದಕ್ಕೆ ಮುಂಚೆ ನಮಗೆ ವಾಕ್ಯದ ಜ್ಞಾನ ಇರಲಿಲ್ಲ, ಧರ್ಮಮಾರ್ಗ ತಿಳಿದಿರಲಿಲ್ಲ, ಉಪದೇಶವು ನಮ್ಮನ್ನು ಜ್ಞಾನಿಗಳನ್ನಾಗಿ ಮಾಡುತ್ತದೆ ಮತ್ತು ಧರ್ಮ ಮಾರ್ಗದಲ್ಲಿ ನಡೆಸುತ್ತದೆ. "ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು" (ಎಫೆ. 5:27).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

# ಸಾಕ್ಷಿಯ ಸ್ವರ

ನಾನು ಅನೇಕ ದಿನಗಳಿಂದ ಸೊಂಟ ನೋವಿನಿಂದ ಬಳಲುತ್ತಿದ್ದೆ, ಈ ಕೆರೀತ್ ಕೂಟದಲ್ಲಿ ನನಗೆ ದೇವರು ಸಂಪೂರ್ಣ ಬಿಡುಗಡೆಯನ್ನು ಕೊಟ್ಟರು ಮತ್ತು ಆತ್ಮೀಕ ವಿಷಯದಲ್ಲಿ ಬೆಳೆಯಲು ಕರ್ತನು ಸಹಾಯಮಾಡಿದನು ದೇವರ ನಾಮಕ್ಕೆ ಸ್ತೋತ್ರ. "ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು" (ವಿಮೋ. 15:26).

**ಜಾರಲ್ಡ್ ಪೆರಾಡೆ, ಜಾವಳಿ.**

ಕಳೆದ 2 ವರ್ಷಗಳಿಂದ ನನಗೆ ಕುಟುಂಬದ ಒತ್ತಡದಿಂದ ಅನೇಕ ಸಮಸ್ಯೆಗಳಿತ್ತು ಇದರಿಂದ ನಾನು ಒಂದು ಕಟ್ಟಲ್ಪಟ್ಟ ಸ್ಥಿತಿಯಲ್ಲಿ ಇದ್ದೆ, ಹಾಗೂ 2 ವರ್ಷದಿಂದ ಕಣ್ಣು ನೋವಿನ ಸಮಸ್ಯೆಯಿಂದ ಬಳಲುತ್ತಿದ್ದೆ ಕರ್ತನು ಈ 10ನೇ ಕೆರೀತ್ ಕೂಟದಲ್ಲಿ ನನಗೆ ಸಂಪೂರ್ಣ ಬಿಡುಗಡೆ ಕೊಟ್ಟು ಜಯವನ್ನು ನೀಡಿದ್ದಾನೆ ಕರ್ತನ ನಾಮಕ್ಕೆ ಸ್ತೋತ್ರವಾಗಲಿ. "ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು" (1 ಪೇತ್ರ. 2:24).

**ಪವಿತ್ರ, ಚಿಕ್ಕಮಂಗಳೂರು.**

ದೇವರೇ, ನಿನ್ನ ಮಾರ್ಗವು ಪರಿಶುದ್ಧವಾದದ್ದು. ನಮ್ಮ ದೇವರಂತೆ ಮಹತ್ತ್ವವುಳ್ಳ ದೇವರು ಯಾರು? (ಕೀರ್ತ. 77:13).

# ಮೋಕ್ಷಲೋಕ

ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ. ಇಲ್ಲದಿದ್ದರೆ ನಿಮಗೆ ಹೇಳುತ್ತಿದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು (ಯೋಹಾ. 14:2–3). ಮೋಕ್ಷವೆನ್ನುವದು ದೇವಮಕ್ಕಳು ನಿತ್ಯನಿತ್ಯಕಾಲವಾಗಿ ಸಂತೋಷಿಸುವ ಸ್ಥಳ. ನಿತ್ಯರಾಜ್ಯದಂತೆ ಪರವಶಗೊಳಿಸುವ ಸಂಗತಿ ಮನುಷ್ಯನಿಗೆ ಬೇರೆ ಯಾವದೂ ಇಲ್ಲ ಕರ್ತನಾದ ಯೇಸುಕ್ರಿಸ್ತನ ಎರಡನೇ ಬರೋಣ, ಪುನರುತ್ಥಾನ, ನ್ಯಾಯತೀರ್ಪು, ಮೋಕ್ಷ ಇದನ್ನು ಕುರಿತು ಜನರು ಬಹಳ ಕುತೂಹಲದಿಂದ ಕೇಳುವರು. ಚಿಕ್ಕ ಮಕ್ಕಳೂ ಸಹ ಇತರ ಉಪದೇಶಗಳನ್ನು ಅರ್ಥಮಾಡಿಕೊಳ್ಳದಿದ್ದರೂ, ಯೇಸುಸ್ವಾಮಿಯು ನಮಗೆ ಒಂದು ವಾಸಸ್ಥಳವನ್ನು ಸಿದ್ಧಮಾಡುತ್ತಾನೆ, ಆತನು ಬಂದು ನಮ್ಮನ್ನು ಕರೆದುಕೊಂಡು ಹೋಗುವನು; ಅಲ್ಲಿ ಹಸಿವೆ ಇಲ್ಲ, ವ್ಯಾಧಿ ಇಲ್ಲ, ಮರಣವಿಲ್ಲ, ಎಂದು ಕೇಳುವಾಗ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವರು. ಆಗಾಗ್ಗೆ ನಾವು ಈ ಸಂಗತಿಗಳನ್ನು ಕುರಿತು ಅವರಿಗೆ ಹೇಳುವೆವಾದರೆ, ಅವರು ಯೇಸುಸ್ವಾಮಿಯನ್ನು ಪ್ರೀತಿಸಲಾರಂಭಿಸುವರು. ಪ್ರಾರಂಭದಲ್ಲಿ ಅವರು ಆತ್ಮೀಕ ಸಂಗತಿಗಳನ್ನು ಇಷ್ಟಪಡುವವರಾದರೂ, ಒಂದು ದಿನ ಅವರೂ ಸಹ ಕರ್ತನನ್ನು ಅಂಗೀಕಾರ ಮಾಡಿಕೊಳ್ಳಲು ಈ ಸತ್ಯವು ಕಾರಣವಾಗಬಹುದು.

ಮಾನವರು ಪಾಪದ ಫಲವಾಗಿ ಅಂಧಕಾರಕ್ಕೊಳಗಾಗುವರು. ಅವರ ನೋಟ, ತಲೆತಗ್ಗಿಸುವಂತಾಗುತ್ತದೆ. ನಾವು ಕಣ್ತೆರೆದು ಪರಲೋಕದ ಮಹಿಮೆಯನ್ನು ಕಾಣಬೇಕೆಂಬದಕ್ಕಾಗಿಯೇ ಕರ್ತನು ಇಹಲೋಕಕ್ಕೆ ಬಂದನು. ನಾನು ಪರಲೋಕದಿಂದ ಬಂದಿದ್ದೇನೆ, ಅದು ಮಹಾ ಮಹಿಮೆಯುಳ್ಳ ರಾಜ್ಯ. ಅಲ್ಲಿ ಪರಮತಂದೆ ಇದ್ದಾನೆ. ದೇವದೂತರು ಇರುವರು, ಅನೇಕ ವಾಸಸ್ಥಳಗಳು ಅಲ್ಲಿವೆ. ದೇವರ ಮಕ್ಕಳು ಸದಾಕಾಲಕ್ಕೂ ಮಹಿಮೆಯು ಅರಸನೊಂದಿಗಿರುವರು ಎಂದೇ ಆತನು ಹೇಳಿದನು. ಅದರೊಂದಿಗೆ ಪವಿತ್ರಾತ್ಮನನ್ನು ಅನುಗ್ರಹಿಸಿ, ವಿಶ್ವಾಸಿಗಳು ಪರಲೋಕದ ಅನುಭವಗಳನ್ನು ರುಚಿಸುವಂತೆ ಮಾಡಿದನು. ಸೂರ್ಯನನ್ನು ನೋಡಿದ ಕಣ್ಣುಗಳಿಗೆ ಬೇರೆಯವುಗಳೆಲ್ಲಾ ಕತ್ತಲಾಗಿ ಕಾಣುವಂತೆ, ಪರಮ ಮಹಿಮೆಯನ್ನು ನೋಡಿದಂಥಾ ಕಣ್ಣುಗಳಿಗೆ ಪ್ರಪಂಚವು ಕತ್ತಲೆಯಾಗಿರುವದು. ಆದ್ದರಿಂದಲೇ ಅಪೊ. ಪೌಲನು ನಾವು ಕಾಣುವಂಥದ್ದನ್ನು ಲಕ್ಷಿಸದೆ ಕಾಣದಿರುವಂಥದ್ದನ್ನು ಲಕ್ಷಿಸುವವರಾಗಿದ್ದೇವೆ (2 ಕೊರಿ. 4:17). ಎಂದು ಹೇಳುತ್ತಾನೆ. ಮೋಶೆಯು ಸ್ವಲ್ಪಕಾಲ ಪಾಪಭೋಗಗಳನ್ನು ಅನುಭವಿಸುವದಕ್ಕಿಂತ ದೇವಜನರೊಂದಿಗೆ ಕಷ್ಟವನ್ನು ಅನುಭವಿಸುವದೇ ಒಳ್ಳೇದೆಂದು ತೀರ್ಮಾನಿಸಿಕೊಂಡನು. ಐಗುಪ್ತ ದೇಶದ ಸರ್ವೈಶ್ವರ್ಯಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠಭಾಗ್ಯವೆಂದೆಣಿಸಿಕೊಂಡನು (ಇಬ್ರಿ. 11:25–26). ಅಬ್ರಹಾಮನು ಶ್ರೀಮಂತನಾಗಿದ್ದಾಗ್ಯೂ, ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು. ಯಾಕಂದರೆ ಅವನು ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರುನೋಡುತ್ತಿದ್ದನು (ಇಬ್ರಿ. 11:9–10). ಆದ್ದರಿಂದಲೇ ಪೌಲನು ಸಂಕಷ್ಟಗಳನ್ನೆಲ್ಲಾ ಸೈರಣೆಯಿಂದ ಸಹಿಸಿದನು (ರೋಮ. 8:18). ನಮ್ಮ ರಕ್ಷಕನು ನಮಗಾಗಿ ಅವಮಾನವನ್ನು ಅಲಕ್ಷ್ಯವಾಡಿ ಶಿಲುಬೆಯ ಮರಣವನ್ನು ಸಹಿಸಿದನು (ಇಬ್ರಿ. 12:2–3).

ನಾವು ಯಾವಾಗಲೂ ಪರಲೋಕವನ್ನು ಕುರಿತು ಚಿಂತೆ ಮಾಡುವವರಾಗಿರಬೇಕು. ನಮ್ಮ ರಕ್ಷಕನು ಯಾವಾಗಲೂ ಪರಲೋಕವನ್ನು ಕುರಿತೇ ಉಪದೇಶ ಮಾಡುತ್ತಿದ್ದನು. ಇಂದು ಬಹು ಜನರು ನಿತ್ಯತ್ವವನ್ನು ಕುರಿತು ಚಿಂತೆಯೇ ಇಲ್ಲದಂಥ ಮೂಢತನದಿಂದ ಮೃಗಗಳಂತೆ ಜೀವಿಸುತ್ತಿದ್ದಾರೆ. ತಮ್ಮ ಹಿಂದಿನವರ ಬೋಧನೆಯನ್ನು ನಿರ್ಲಕ್ಷಿಸುವವರಾಗಿದ್ದಾರೆ. ತಮ್ಮನ್ನು ಜ್ಞಾನಿಗಳೆಂದೆಣಿಸಿಕೊಂಡಿರುವವರು ಬುದ್ಧಿಹೀನರೆಂದೆಣಿಸಿಕೊಂಡಿರುವವರಲ್ಲಿ ಇರುವ ಪರಿಶುದ್ಧತೆಯೂ ಇಲ್ಲದವರಾಗಿದ್ದಾರೆ. ದೇವರ ರಾಜ್ಯವು ಮಾತಿನಲ್ಲಿ ಅಲ್ಲ, ಶಕ್ತಿಯುಲ್ಲಿಯೇ ಆಧಾರಗೊಂಡಿದೆ (1 ಕೊರಿ. 4:20). ಪರಲೋಕದ ಮಹಿಮೆಯನ್ನು ಕಂಡು ನಮ್ಮ ಅಂತರ್ಯ ಪರವಶವಾಗಲು ದೇವರಾತ್ಮನು ತಾನೇ ನಮ್ಮ ಕಣ್ಣುಗಳನ್ನು ತೆರೆಯಲಿ.

**ಮೋಕ್ಷವೆಂದರೆ ಏನು?**

ಮೋಕ್ಷ ಎಂಬದು ಕರ್ತನ ಮಕ್ಕಳು ಸ್ವತಂತ್ರಿಸಿಕೊಳ್ಳಲಿರುವಂಥ ನಿತ್ಯ ವಾಸಸ್ಥಳವಾಗಿದೆ (ಯೋಹಾ. 14:2–3). "ತಂದೆಯ ಮನೆ" "ವಾಸಸ್ಥಳ" "ಆತನು ಇರುವ ಸ್ಥಳ" ಎಂದು ಮೋಕ್ಷವನ್ನು ಕುರಿತು ರಕ್ಷಕನು ಹೇಳುತ್ತಾನೆ. "ದೇವರ ನಗರ" "ನಿತ್ಯ ವಾಸಸ್ಥಾನ" "ನಮ್ಮ ವಾಸಸ್ಥಳ" "ಕೈಗಳಿಂದ ಕಟ್ಟಲ್ಪಡದ ಮನೆ" "ಅಸ್ತಿವಾರಗಳುಳ್ಳ ಪಟ್ಟಣ" "ಶಾಶ್ವತ ರಾಜ್ಯ" "ಸಿದ್ಧವಾಗಿರುವ ನಗರ" "ಪರಲೋಕ" ಎಂದೆಲ್ಲಾ ಸತ್ಯವೇದದಲ್ಲಿ ಹೇಳಿರುವದನ್ನು ಕುರಿತು ಓದುತ್ತೇವೆ. ಮೋಕ್ಷವೆಂಬದು ಒಂದು ಹಂತ ಅಥವಾ ಅಂತಸ್ತು ಹೊರತು ಅದು ನಿಗದಿತವಾದ ಒಂದು ಸ್ಥಳವಲ್ಲವೆಂದು ಕೆಲವರು ಹೇಳುತ್ತಾರೆ. ಆಕಾಶದಲ್ಲಿ ಮೋಡಗಳು ಅಲ್ಲಲ್ಲಿ ಚದರಿಹೋಗುವಂತೆ ದೇವಮಕ್ಕಳು ಬರೀ ಆತ್ಮಗಳಾಗಿ ಅಲೆದಾಡುವರೇ? ಅಥವಾ ಅಂತರದಲ್ಲಿ ತೇಲಾಡುವರೇ? ಇಲ್ಲ, ಇಲ್ಲವೇ ಇಲ್ಲವೆಂದು ದೃಢವಾಗಿ ಹೇಳಬಹುದು.

ನಾವು ವಾಸಿಸುವ ಈ ಪ್ರಪಂಚವು ಪಾಪದ ನಿಮಿತ್ತವಾಗಿ ಶಪಿಸಲ್ಪಟ್ಟಿದ್ದಾಗ್ಯೂ, ಇದು ಎಷ್ಟು ಅಂದವಾಗಿದೆಯಲ್ಲವೇ. ಹೌದು, ಆರು ದಿನಗಳಲ್ಲಿ ಸೃಷ್ಟಿಸಿರುವ ಈ ಪ್ರಪಂಚ ಇಷ್ಟು ಅಂದವಾಗಿರುವಾಗ, ತನ್ನ ಮಕ್ಕಳನ್ನು ಕರೆದೊಯ್ಯಲು ಕರ್ತನು

ಅದ್ಭುತಗಳನ್ನು ನಡಿಸುವ ದೇವರು ನೀನೇ; ಜನಾಂಗಗಳಲ್ಲಿ ಪರಾಕ್ರಮವನ್ನು ತೋರ್ಪಡಿಸಿದಿ (ಕೀರ್ತ. 77:14).

ಸಿದ್ಧಪಡಿಸುತ್ತಿರುವ ಆ ಪರಲೋಕ ಮೋಕ್ಷಲೋಕ ಇನ್ನೆಷ್ಟು ಅಂದವಾಗಿರಬಹುದಲ್ಲವೇ. ಇಹದಲ್ಲಿ ನಮಗಿರುವ ಈ ಪ್ರಪಂಚ ಶಾಶ್ವತವಾದದ್ದಲ್ಲ (ಇಬ್ರಿ. 13:14). ನಾವು ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗುವಾಗ, ಒಂದು ದೇಶವನ್ನು ಬಿಟ್ಟು ಮತ್ತೊಂದು ದೇಶಕ್ಕೆ ಹೋಗುತ್ತೇವೆ. ಮಣ್ಣಿನ ದೇಶವನ್ನು ತೊರೆದು ಮಹಿಮೆಯಾದ ದೇಶಕ್ಕೆ ಪ್ರವೇಶಿಸುತ್ತೇವೆ. ರಕ್ತಮಾಂಸಗಳು ಕಳಚಿಬಿಟ್ಟು ಮಹಿಮೆಯುಳ್ಳ ಆತ್ಮೀಕ ಶರೀರವನ್ನು ಪಡೆದುಕೊಳ್ಳುವೆವು (1 ಕೊರಿ. 15:50). ಕೊರತೆಯುಳ್ಳವರಾದ ನಾವು ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತೇವೆ. ಈಗ ನಂಬಿಕೆಯಿಂದ ದೃಷ್ಟಿಸುವ ನಾವು ಆಗ ಯೇಸುಸ್ವಾಮಿಯನ್ನು ನೇರವಾಗಿ ದರ್ಶನಮಾಡುತ್ತೇವೆ. ನಂಬಿಕೆಯ ಕಣ್ಣುಗಳಿಂದ ಈಗ ಕರ್ತನನ್ನು ನೋಡುವವರು ಆಗ ಕರ್ತನ ಮುಖವನ್ನು ಪ್ರತ್ಯಕ್ಷವಾಗಿ ನೋಡುವರು. ಇಹದಲ್ಲಿ ಕರ್ತನು ಅನುಗ್ರಹಿಸಿರುವ ಒಳ್ಳೇಕಾರ್ಯಗಳು ಇಹದ ಅಗತ್ಯತೆಗಳನ್ನು ಪೂರೈಸುವವುಗಳಾಗಿ ಕೊಡಲ್ಪಟ್ಟಂತೆ, ಪರಲೋಕ ಜೀವಿತಕ್ಕೆ ತಕ್ಕದಾಗಿ ಅನುಭವಿಸವದಕ್ಕಾಗಿಯೇ ಅನುಗ್ರಹಿಸಿರುವ ಅನೇಕ ಒಳ್ಳೇಯ ಕಾರ್ಯಗಳುಂಟು. ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನೂ ಕಣ್ಣು ಕಾಣಲಿಲ್ಲ; ಕಿವಿ ಕೇಳಲಿಲ್ಲ (1 ಕೊರಿ. 2:9). ದೇವರು ಪರಲೋಕದಲ್ಲಿದ್ದಾನೆ ಎಂದು ಹೇಳುವ ಅನೇಕ ವಾಕ್ಯಗಳು ಸತ್ಯವೇದದಲ್ಲಿ ಇವೆ. ಕರ್ತನು ಎಲ್ಲಾ ಕಡೆಗಳಲ್ಲೂ ಇರುವಾತನು. ಆದ್ದರಿಂದ ಆತನು ನಿರ್ದಿಷ್ಟವಾಗಿ ಒಂದೇ ಸ್ಥಳದಲ್ಲಿರುವಾತನೆಂದು ತಿಳಿದುಕೊಳ್ಳಬಾರದು. ದೇವಾಧಿದೇವರ ಮಹಿಮೆ, ಪ್ರಭಾವ ಭೂಮಿಯನ್ನೆಲ್ಲಾ ಆವರಿಸಿಕೊಂಡಿರುವಲ್ಲಿ, ಆತನು ವಾಸಿಸುವ ಒಂದು ಸ್ಥಳ ಇದೆ; "ಪರಲೋಕದಲ್ಲಿರುವ ತಂದೆ" ಎಂಬ ಪದವು ಮತ್ತಾಯನ ಸುವಾರ್ತೆಯಲ್ಲಿ ಅನೇಕ ಕಡೆಗಳಲ್ಲಿರುವದನ್ನು ನಾವು ನೋಡುತ್ತೇವೆ. ಯೇಸುಸ್ವಾಮಿಯು ಅಲ್ಲಿಂದಲೇ, ಈ ಭೂಲೋಕಕ್ಕೆ ಇಳಿದು ಬಂದನು. ಪುನರುತ್ಥಾನದ ನಂತರ ಹಿಂದೆ ತಾನಿದ್ದಂಥ ಅದೇ ಸ್ಥಳಕ್ಕೆ ಏರಿಹೋದನು (ಯೋಹಾ. 6:62). ಈಗಲೂ ಕರ್ತನು ತಂದೆ ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ. ಆತನು ಪುನ: ಬರುತ್ತಾನೆ. ಅಲ್ಲಿಂದಲೇ ಪವಿತ್ರಾತ್ಮನೂ ಬಂದನು. ಅಲ್ಲಿಂದಲೇ ದೇವದೂತರು ಇಳಿದುಬರುತ್ತಾರೆ. ಪುನ: ಇದ್ದಲ್ಲಿಗೆ ಹೋರಣತ್ತಾರೆ. ದೇವರು ತನ್ನ ಚಿತ್ತವನ್ನು ಪರಲೋಕದಲ್ಲಿದ್ದು ನಡಿಸುತ್ತಿರುವನು.

ಮೋಕ್ಷಲೋಕವೆಂಬದು ಹೋಲಿಸಲಾರದಂಥಾ ಅಂದವಾದ ಸ್ಥಳ. ಇಹಲೋಕದಲ್ಲಿನ ಅರಸರ ಅರಮನೆಗಳೇ ಅಷ್ಟು ಅಂದವಾಗಿ ವೈಭವೋಪೇತವಾಗಿರುವದಾದರೆ ಪರಲೋಕ ಇನ್ನೆಷ್ಟು ವೈಭವ ಉಳ್ಳದ್ದಾಗಿಬಹುದಲ್ಲವೇ. ಪ್ರಕ. 21ನೇ ಅಧ್ಯಾಯದಲ್ಲಿ ಮೋಕ್ಷಲೋಕದ ವರ್ಣನೆ ಇದೆ. ಅದನ್ನು ಓದಿ ತಿಳಿಯಬಹುದು. ಯೇಸುಕ್ರಿಸ್ತನು ಈಗ ತಂದೆಯ ಬಲಗಡೆಯಲ್ಲಿ, ಮಹಿಮಾನ್ವಿತ ನಾಗಿದ್ದಾನೆ. ಅಲ್ಲಿಂದಲೇ ಆತನು ಪುನ: ಬರುತ್ತಾನೆ.

**ಮೋಕ್ಷದಲ್ಲಿ ನಾವು ಯಾರನ್ನೆಲ್ಲಾ ಕಾಣುತ್ತೇವೆ**

1. **ದೇವರನ್ನು ಕಾಣುವೆವು; ಆತನ ದಾಸರು ಆತನನ್ನು ಸೇವಿಸುವರು** (ಪ್ರಕ. 22:4). ಮೋಕ್ಷದಲ್ಲಿ ನಾವು ಯಾವಾಗಲೂ ಆತನ ಮುಖವನ್ನು ನೋಡುತ್ತಲೇ ಇರಬಹುದು.

2. **ನಮ್ಮ ರಕ್ಷಕನನ್ನು ಅಲ್ಲಿ ಕಾಣುವೆವು; ಈಗ ನಾವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುವವರಾಗಿದ್ದೇವೆ. ಮೋಕ್ಷದಲ್ಲಿ ಯೇಸುಸ್ವಾಮಿಯನ್ನು ದರ್ಶನ ಮಾಡುತ್ತೇವೆ** (1 ಪೇತ್ರ. 1:8–9). ಲೋಕವು ಹುಟ್ಟುವದಕ್ಕೆ ಮೊದಲೇ ಆತನು ಇದ್ದ ಸ್ಥಳವನ್ನು ಆತನ ಮಹಿಮೆಯನ್ನೂ ದೇವಮಕ್ಕಳು ಕಾಣುವರು.

3. **ದೇವದೂತರನ್ನು ಅಲ್ಲಿ ನೋಡುತ್ತೇವೆ; ಆತನ ಸುತ್ತ ಸೆರಾಫಿಯರು ಇದ್ದರು ಎಂದು ಯೆಶಾ. 6:2ರಲ್ಲಿ ನೋಡುತ್ತೇವೆ.** ದೇವಾಧಿದೇವರನ್ನು ಸೇವಿಸುವ ದೂತರೂ, ಅಲ್ಲಿರುವರು. ಕರ್ತನ ಬರೋಣದಲ್ಲಿ ಈ ದೂತರು, ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕು ದಿಕ್ಕುಗಳಿಂದಲೂ ಒಟ್ಟುಗೂಡಿಸುವರು. ಆತನ ಆಜ್ಞೆಗೆ ವಿಧೇಯರಾಗಿ ಕಾರ್ಯವಮಾಡುವ ದೇವದೂತ ಸೈನ್ಯವು ಪರಲೋಕದಲ್ಲಿರುವದು.

4. **ದೇವಭಕ್ತರನ್ನು ಕಾಣುವೆವು:** ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲು ಮಕ್ಕಳ ಸಭೆ ಅಲ್ಲಿ ಉಂಟು (ಇಬ್ರಿ. 12:23). ದೇವಜನರೊಂದಿಗೆ ಒಂದೇ ಸಂಸ್ಥಾನದವರು ಮಹಾ ಹಿಂಸೆಯನ್ನು ಅನುಭವಿಸಿ ಬಂದವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದುಕೊಂಡವರು ಅಲ್ಲಿರುವರು. ಅವರು ದೇವರ ಸಿಂಹಾಸನದ ಮುಂದೆ ಇದ್ದುಕೊಂಡು ಆತನ ಆಲಯದಲ್ಲಿ ಹಗಲಿರುಳು ಆತನ ಸೇವೆ ಮಾಡುವರು (ಪ್ರಕ. 7:14–16).

ಮಾನವ ಕೋಟಿಯ ಮೂಲಪಿತೃವಾದ ಆದಾಮನನ್ನು ನಾವು ನೋಡುವಾಗ, ನಮಗೆ ಎಂಥಾ ಸಂತೋಷವಲ್ಲವೇ. ಪ್ರವಾದಿಗಳು, ಅಪೋಸ್ತಲರು, ರಕ್ತ ಸಾಕ್ಷಿಗಳು, ಎಲ್ಲರನ್ನೂ ಅಲ್ಲಿ ಕಾಣಬಹುದು. ಅಬ್ರಹಾಮ, ಇಸಾಕ, ಯಾಕೋಬ, ಹನೋಕ, ಮೋಶೆ, ದಾವೀದ ಮುಂತಾದವರನ್ನೆಲ್ಲಾ ಕಾಣಬಹುದು. ಕರ್ತನ ಅಪೋಸ್ತಲರನ್ನೂ ಪೌಲನನ್ನು ಕಾಣಬಹುದು. ಅಲ್ಲಿಯವರೆಗೆ ನಾವು ಕೇಳಿ ತಿಳಿದಂಥಾ, ಓದಿ ತಿಳಿದಂಥಾ ಪ್ರಿಯರಾದ ಭಕ್ತಸೇವಕರನ್ನೂ ಕಾಣಬಹುದು. ಅವರ ಪರಿಚಯವಿಲ್ಲವಲ್ಲಾ ಎಂಬ ಯೋಚನೆಗೆ ಕಾರಣವೇ ಇರುವದಿಲ್ಲ. ಹೇಗೆಂದರೆ ರೂಪಾಂತರ ಬೆಟ್ಟದಲ್ಲಿ ಮೋಶೆ ಮತ್ತು ಎಲೀಯರನ್ನು ಎಂದೂ ಸಂಧಿಸದೆ ಇದ್ದ ಶಿಷ್ಯರು ನೋಡಿದಾಗ ಅವರಿಬ್ಬರೂ ಯಾರೆಂದು ತಿಳಿದುಕೊಂಡರು. ಅದೇ ರೀತಿ ನಾವೂ ಸಹ ಮೋಕ್ಷದಲ್ಲಿ ಎಲ್ಲರನ್ನೂ ಅರಿತುಕೊಳ್ಳುತ್ತೇವೆ. ಅಪೊಸ್ತಲನಾದ ಪೌಲನು

ಸೇನಾಧೀಶ್ವರನಾದ ಯೆಹೋವನೇ, ನಿನ್ನಲ್ಲಿ ಭರವಸವಿಡುವ ಮನುಷ್ಯನು ಧನ್ಯನು (ಕೀರ್ತ. 84:12).

ಥೆಸಲೋನಿಕದವರಿಗೆ ಕ್ರಿಸ್ತನು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸವೂ, ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯವಾಲೆಯೂ ನೀವೇ ಅಲ್ಲವೇ ಎನ್ನುತ್ತಾನೆ (1 ಥೆಸ. 2:19). ಭಕ್ತಜನರ ಕೂಟವೂ ಸಂಧಿಸಿ, ಸಂಭಾಷಿಸಿ, ಕೂಡಿ ಪ್ರಾರ್ಥಿಸುವಾಗ ಉಂಟಾಗುವ ಸಂತೋಷವನ್ನು ನೆನಸಿ ಅಲ್ಲಿಯೂ ಆನಂದಿಸಬಹುದು.

5. **ನಮ್ಮ ಪ್ರೀತಿಪಾತ್ರರು, ಬಂಧುವರ್ಗದವರನ್ನು ಅಲ್ಲಿ ಕಾಣಬಹುದು.** ಯೋಹಾ. 11:23–24ರಲ್ಲಿ ಯೇಸುಸ್ವಾಮಿ ಮಾರ್ಥಳ ಬಳಿ, ನಿನ್ನ ತಮ್ಮನು ಎದ್ದು ಬರುವನೆಂದು ಹೇಳಿದಾಗ, ಮಾರ್ಥಳು– ಸತ್ತವರಿಗೆ ಕಡೇದಿನದಲ್ಲಿ ಪುನರುತ್ಥಾನವಾಗುವಾಗ ಅವನೂ ಎದ್ದು ಬರುವನೆಂದು ನಾನು ಬಲ್ಲೆನು ಎನ್ನುತ್ತಾಳೆ. ಆದ್ದರಿಂದ ನಮ್ಮ ಪ್ರಿಯರನ್ನು ಅಲ್ಲಿ ಕಾಣುತ್ತೇವೆ. ಪಾಪದಿಂದ ಮರಣವು ಬಂದಿತು. ನಿತ್ಯಜೀವವೂ ನಿರ್ಲಯತ್ವವೂ ಯೇಸುಕ್ರಿಸ್ತನಿಂದ ಉಂಟಾಯಿತು. ಕ್ರೈಸ್ತವಾರ್ಗದ ಹಿರಿಮೆ ಇದೇ. ಈ ನಂಬಿಕೆಯಲ್ಲಿಯೇ ನಮ್ಮ ಪ್ರಿಯರನ್ನು ಇಹಲೋಕದಲ್ಲಿ ನಾವು ಕಳೆದುಕೊಳ್ಳುವಾಗ, ಅವರನ್ನು ಮೋಕ್ಷದಲ್ಲಿ ಸಂಧಿಸುತ್ತೇವೆ ಎಂಬ ನಂಬಿಕೆಯಿಂದಲೇ ಬೀಳ್ಕೊಡುತ್ತೇವೆ. ಮೋಕ್ಷದ ಆನಂದವು ಸಂತೋಷವು ಆದರ ಅಂದ ಚೆಂದ ಮಾತ್ರವೇ ಅಲ್ಲ, ದೇವಾಧಿದೇವರನ್ನು ಆತನ ಮಕ್ಕಳನ್ನೂ ನಾವು ನೋಡಿ, ಅವರೊಂದಿಗೆ ಕೂಡಿ ನಲ್ಲಿಯುವದೇ ಮೋಕ್ಷದ ಆನಂದ, ಅಲ್ಲಿ ನಾವು ಕಳೆದುಕೊಂಡ ನಮ್ಮ ಕುಟುಂಬದವರು, ಸ್ನೇಹಿತರು, ಬಂಧುಗಳೆಲ್ಲರನ್ನೂ ಕಾಣುತ್ತೇವೆ. ವಿಶ್ವಾಸಿಗಳಾಗಿ ಬದುಕಿದವರನ್ನು ನಾವು ಅಲ್ಲಿ ಖಂಡಿತಾ ಕಾಣುತ್ತೇವೆ, ಅವರು ಆ ಮೋಕ್ಷದಲ್ಲಿ ಇರುವರು; ಆದ್ದರಿಂದ ನಾವು ರಕ್ಷಣೆ ಹೊಂದಿ ಅವರು ನಡೆದ ಹಾದಿಯಲ್ಲಿ ನಡೆಯಲಿಲ್ಲವಾದರೆ ನಾವು ಅಲ್ಲಿ ಹೋಗಲಾರೆವು, ಅವರನ್ನು ಕಾಣಲಾರೆವು.

**ಮೋಕ್ಷದಲ್ಲಿ ಯಾವ ಭಾಷೆ ಮಾತನಾಡುತ್ತೇವೆ?**

ಇಹಲೋಕವೆಂಬ ಈ ಪ್ರಪಂಚದಲ್ಲಿ ಅನೇಕ ಭಾಷೆಗಳಿವೆ. ಎಲ್ಲರಿಗೂ ಎಲ್ಲಾ ಭಾಷೆಯೂ ತಿಳಿಯದು. ಭಾಷೆ ತಿಳಿಯದವರು ಒಬ್ಬರನ್ನೊಬ್ಬರು ಸಂಧಿಸುವಾಗ ಕೈಕಲುಕಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ಭಾಷೆ ತಿಳಿಯದ್ದರಿಂದ ಮಾತಾಡಲಾರೆವಲ್ಲಾ ಎಂಬ ಅತೃಪ್ತಿ ಇಬ್ಬರಲ್ಲೂ ಇರುತ್ತದೆ. ಅಪೊ. ಪೌಲನು ಹೇಳುತ್ತಾನೆ. ಆಕಾಶದ ಪರಿಯಂತರಕ್ಕೂ ಒಯ್ಯಲ್ಪಟ್ಟನು. ಅಂಥ ಮನುಷ್ಯನು ಪರದೈಸಕ್ಕೆ ಒಯ್ಯಲ್ಪಟ್ಟು, ಮನುಷ್ಯರು ನುಡಿಯಲಶಕ್ಯವಾದ ಹೇಳಬಾರದ ಮಾತುಗಳನ್ನು ಕೇಳಿದನೆಂದು ಬಲ್ಲೆನು (2 ಕೊರಿ. 12:3) ಎಂದು ಹೇಳುತ್ತಾನೆ. ಅದು ಯಾವದೇ ಭಾಷೆಯಾದರೂ ಸರಿ, ಆ ಪರಲೋಕ ಭಾಷೆ, ಎಲ್ಲರೂ ಸೇರಿ ಕರ್ತನನ್ನು ಸ್ತುತಿಸುವ ಭಾಷೆಯಾಗಿರುವದು ಎಂಬದರಲ್ಲಿ ಸಂಶಯವಿಲ್ಲ.

**ಮೋಕ್ಷದಲ್ಲಿ ನಾವು ಹೇಗೆ ಇರುತ್ತೇವೆ?**

ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು (ಫಿಲಿ. 3:21). ಈಗ ನವುಗಿರುವ ಶರೀರದೊಂದಿಗೆ ದೇವಮಹಿಮೆಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ರೂಪಾಂತರ ಅವಶ್ಯವಾದದ್ದು. 1 ಕೊರಿ. 15:53ರಲ್ಲಿ ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವದು. ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನು ಧರಿಸಿಕೊಳ್ಳುತ್ತೇವೆ (1 ಕೊರಿ. 15:49). ಆದ್ದರಿಂದ ನಮ್ಮ ಆತ್ಮೀಕ ಜೀವಿತ ಭಾಗ್ಯವುಳ್ಳದ್ದಾಗಿರುವದು. ಇಲ್ಲಿ ನಮಗೆ ದೇವಸಮಾಧಾನವಿದ್ದರೂ, ಉಪದ್ರವಗಳ ಮಧ್ಯದಲ್ಲೇ ನಾವು ಸೇವೆ ಮಾಡಬೇಕಾಗಿದೆ. ಅಲ್ಲಿ ಯಾವ ಕೇಡುಕೂ ಇರುವದಿಲ್ಲ. ಇಲ್ಲಿ ನಮ್ಮ ಶರೀರವು ಕೆಲವು ಸಮಯಗಳಲ್ಲಿ ಸೈತಾನನ ಪ್ರೇರಣೆಗೆ ಒಳಗಾಗುತ್ತದೆ. ಆದರೆ ಅಲ್ಲಿ ಶೋಧನೆ ಎಂಬುದು ಇಲ್ಲ. ಪಾಪವೇ ಇಲ್ಲದ ಜೀವಿತ ಹೇಗಿರಬಹುದೆಂದು ಚಿಂತನೆ ಮಾಡಿನೋಡಿರಿ. ಇಲ್ಲಿ ನಾವು ಅಡಿಗೆ ಊಟ ಎಂದು ಯಾವಾಗಲೂ ಬೇಸರಿಸಿಕೊಳ್ಳುತ್ತೇವೆ. ಆದರೆ ಆ ಮೋಕ್ಷದಲ್ಲಿ ಹಸಿವೆಯಿಲ್ಲ, ಬಾಯಾರಿಕೆ ಇರುವದಿಲ್ಲ. ಇಲ್ಲಿ ಚಿಂತೆ, ಕಣ್ಣೀರು ನಮ್ಮನ್ನು ಕುಗ್ಗಿಸಿಬಿಡುತ್ತದೆ. ಅಲ್ಲಿ ಚಿಂತೆ ಎಂಬ ಪದಕ್ಕೆ ಅರ್ಥ ಸಹ ತಿಳಿಯದಂತೆ ಇರುತ್ತೇವೆ. ಅಲ್ಲಿ ವ್ಯಾಧಿ, ಚಿಕಿತ್ಸೆ, ಹಣದ ಅಭಾವ, ಮರಣ ಇವು ಯಾವುವೂ ಇಲ್ಲದಂಥಾ ಒಂದು ಸ್ಥಿತಿಯಲ್ಲಿ ನಾವಿರುತ್ತೇವೆ. ಮುಖ್ಯವಾಗಿ ಹೇಳುವದಾದರೆ ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆ ಪದವಿಯನ್ನು ಆಲೋಚಿಸಿದಲ್ಲಿ ಈಗಿನ ಕಾಲದ ಕಷ್ಟಗಳು ಅಲ್ಪವಾದದ್ದು.

**ಮೋಕ್ಷದಲ್ಲಿ ನಾವು ಎಷ್ಟು ಕಾಲ ಇರುತ್ತೇವೆ :–**

ದೇವಾಧಿದೇವನು ಎಷ್ಟು ಕಾಲವಿರುವನೋ ಎಷ್ಟು ಕಾಲ ಆತನ ರಾಜ್ಯವಿರುವದೋ, ಅಷ್ಟು ಕಾಲ ಆತನ ಮಕ್ಕಳೂ ಇರುವರು. ಈ ಪ್ರಪಂಚದ ರಾಜ್ಯಗಳು ಉದಯವಾಗುತ್ತವೆ, ಹಾಗೆಯೇ ಮರೆಯಾಗುವವು. ಕ್ಷಾಮಗಳಿಂದಲೂ, ಅಂಟು ಜಾಡ್ಯಗಳಿಂದಲೂ ಪಟ್ಟಣಗಳು ಬರಡಾಗಿ ಹೋಗುತ್ತವೆ. ಅಗ್ನಿಪರ್ವತಗಳಿಂದಲೂ, ಭೂಕಂಪನಗಳಿಂದಲೂ ನಗರಗಳು ಶವಾಗಾರಗಳಾಗುತ್ತವೆ. ಇಹದಲ್ಲಿ ಶಾಶ್ವತವಾದ ಪಟ್ಟಣವು ನಮಗಿಲ್ಲ; ನೀವು ಕಾಣುವಂಥವುಗಳೆಲ್ಲವೂ ಅನಿತ್ಯವಾದವುಗಳು. ದೇವರಾದರೋ ನಿತ್ಯವಾದಾತನು. ಆತನ ರಾಜ್ಯ ನಿತ್ಯರಾಜ್ಯ. ಆತನ ರಾಜ್ಯವನ್ನು ಯಾರೂ ಕದಲಿಸಲಾರರು (ಇಬ್ರಿ. 12:28). ಆತನ ರಕ್ಷಣೆ ನಿರಂತರವಾದದ್ದು. (ಇಬ್ರಿ. 5:10). ಆತನು ಕೊಡುವ ಬಾಧ್ಯತೆ ಲಯ ಕಳಂಕ ಕ್ಷಯಗಳಿಲ್ಲದ್ದು (1 ಪೇತ್ರ. 1:4). ಆತನು ಕೊಡುವ ಆದರಣೆ ನಿತ್ಯವಾದದ್ದು (2 ಥೆಸ. 2:16). ನಾವು ಆಳ್ವಿಕೆ ಮಾಡುವ ಕಾಲವು ಯುಗಯುಗಾಂತರಗಳದ್ದು (ಪ್ರಕ. 22:5). ಈ ವಾಕ್ಯಗಳ ಮೂಲಕ, ಕರ್ತನು, ನಾವು ಸ್ವಾಸ್ಥ್ಯಮಾಡಿಕೊಳ್ಳುವ ರಾಜ್ಯಕ್ಕಾಗಿ ನಮ್ಮನ್ನು ರೂಪಾಂತರಿಸಿ, ನಾವು ಯಾವಾಗಲೂ ಕರ್ತನೊಂದಿಗೆ ಇರುತ್ತೇವೆ ಎಂಬದನ್ನೂ

ನೀತಿಯು ಆತನ ಮುಂದೆ ಹೋಗುತ್ತಾ ನಾವು ಆತನ ಹೆಜ್ಜೆ ಹಿಡಿದು
ನಡೆಯುವಂತೆ ದಾರಿ ಮಾಡುವದು (ಕೀರ್ತ. ೮೫:೧೩).

ದೃಢಪಡಿಸುತ್ತದೆ. ರೂಪಾಂತರ ಬೆಟ್ಟದಲ್ಲಿ ಕ್ರಿಸ್ತೇಸುವಿನ ಮಹಿಮೆಯನ್ನು ಸ್ವಲ್ಪಕಾಲ ಮಾತ್ರ ಕಂಡಂಥ ಶಿಷ್ಯರು ನಾವು ಅಲ್ಲಿಯೇ ಇರುವದು ಒಳ್ಳೇದು ಎಂದರು. ಇಂಥಾ ಮಹಿಮೆಯುಳ್ಳ ಭಾಗ್ಯಕರವಾದ ಸ್ಥಳವನ್ನು ಪ್ರವೇಶಿಸುವ ನಮಗೆ ಅದನ್ನು ಬಿಡುವ ಮನಸ್ಸು ಹೇಗೆ ಬಂದೀತು? ನಿತ್ಯವೆಂಬುದು ಎಷ್ಟು ಕಾಲವೆಂದು ಹೇಳುವಾಗಲೇ ನಮ್ಮ ಹೃದಯವು ನಿತ್ಯಾನಂದದಿಂದ ತುಂಬುತ್ತದೆ. ನಿತ್ಯದೇವನನ್ನು ಕಂಡು ಆನಂದಿಸಲು ನಮಗೆ ನಿತ್ಯಕಾಲವು ಬೇಕು. ನಾವು ಆತನ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬದನ್ನು ದೇವಜನರೊಂದಿಗೆ ಕೂಡಿ ಅರಿತುಕೊಳ್ಳೋಣ (ಎಫೆ. 3:18). ನಿತ್ಯಕಾಲವೆಂಬದು ಕೋಟಿಕೋಟಿ ಕೋಟಿ ವರ್ಷಗಳಾದರೂ ಅದು ಮುಗಿಯದು.

**ಮೋಕ್ಷ ಲೋಕದಲ್ಲಿ ಪ್ರವೇಶಿಸುವವರು ಯಾರು?**

ಮೋಕ್ಷವೆಂಬದು ಸಿದ್ಧವಾಗಿರುವವರಿಗಾಗಿ ಸಿದ್ಧಮಾಡಲ್ಪಟ್ಟಿರುವ ಸ್ಥಳ. ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರ್ಯಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಅಲ್ಲಿ ಸೇರುವರು (ಪ್ರಕ. 21:27). ಜೀವಬಾಧ್ಯರ ಪುಸಕ್ತದಲ್ಲಿ ಯಾವನ ಹೆಸರು ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಡುವನು (ಪ್ರಕ. 20:15). ನಾವು ಮೋಕ್ಷದಲ್ಲಿ ಪ್ರವೇಶಿಸುವದಕ್ಕೆ ಮೊದಲು, ನಮ್ಮ ಹೆಸರುಗಳು ಅಲ್ಲಿ ಪ್ರವೇಶಿಸಿರಬೇಕು. ಉದಾ:ಕೆಲವು ಜನರು ಬಹುದೂರ ಪ್ರಯಾಣಮಾಡಿದ ನಂತರ ಒಂದು ಛತ್ರದಲ್ಲಿ ತಂಗುವದಕ್ಕಾಗಿ ಬಂದರು ಛತ್ರದವನು ಅಲ್ಲಿ ಸ್ಥಳವಿಲ್ಲವೆಂದು ಹೇಳಿಬಿಟ್ಟನು. ಅದನ್ನು ಕೇಳಿದ ಆ ಜನರು ಅಲ್ಲಿಂದ ಹೊರಡುತ್ತಿದ್ದಾಗ, ಒಬ್ಬ ಅಮ್ಮ ಮಾತ್ರ ಛತ್ರದ ಬಾಗಿಲಲ್ಲಿ ಕುಳಿತಿದ್ದಳು. "ನೀನು ಯಾಕೆ ಇನ್ನೂ ಇಲ್ಲಿ ಕುಳಿತಿರುವಿ? ಒಬ್ಬಾತನು ಆಕೆಯನ್ನು ಕೇಳಿದನು. ಅದಕ್ಕೆ ಆಕೆಯು ಪ್ರತ್ಯುತ್ತರವಾಗಿ "ನಿಮಗೆ ಸ್ಥಳವಿಲ್ಲ, ಆದರೆ ನಾನು ಮನೆ ಬಿಟ್ಟು ಹೊರಡುವ ಮೊದಲೇ ನನ್ನ ಹೆಸರನ್ನು ಛತ್ರದವನಿಗೆ ಕಳುಹಿಸಿಕೊಟ್ಟು ಸ್ಥಳವನ್ನು ಪಡೆದುಕೊಂಡಿದ್ದೇನೆ" ಎಂದಳು. ಆಗ ಆ ಜನರು ತಮ್ಮ ಅವಿವೇಕಕ್ಕಾಗಿ ನಾಚಿಕೆ ಪಟ್ಟು, ಆ ಸ್ಥಳವನ್ನು ಬಿಟ್ಟು ಹೊರಟುಹೋದರು. ಸಹೋದರರನೇ, ಸಹೋದರಿಯೇ ಅಂತ್ಯದಲ್ಲಿ ನೋಡಿಕೊಳ್ಳೋಣ ಎಂದೂ, ಕೊನೆಯಲ್ಲಿ ಎಲ್ಲವೂ ಸರಿಯಾಗುವದು ಎಂದಾಗಲಿ ನೆನಸಿ ಮೋಸಹೋಗಬೇಡ. ನೀನು ಅಲ್ಲಿ ಹೋಗುವ ಮುನ್ನ ನಿನ್ನ ಹೆಸರು ಜೀವಪುಸಕ್ತದಲ್ಲಿ ಬರೆಯಲ್ಪಡಬೇಕು. ಜೀವಬಾಧ್ಯರ ಪಟ್ಟಿಯಲ್ಲಿ ನನ್ನ ಹೆಸರು ಬರೆದಿದೆ ಎಂಬ ನಿಶ್ಚಯ ನಿನಗಿಲ್ಲದಿದ್ದಲ್ಲಿ, ನಿನಗೆ ಆ ಭಾಗ್ಯವು ದೊರೆಯುವದಿಲ್ಲವೆಂಬದು ನಿಶ್ಚಯ.

ಕರ್ತನ ಸೇವೆಗಾಗಿ ಶಿಷ್ಯರನ್ನು ಕಳುಹಿಸಿಕೊಟ್ಟಾಗ ಅವರು ಹಿಂತಿರುಗಿ ಬಂದು, ಸ್ವಾಮೀ, ದೆವ್ವಗಳು ಕೂಡಾ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಅಂದಾಗ, ಕರ್ತನು ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ; ಎಂದು ಹೇಳಿದ್ದಾನಲ್ಲವೇ. ನಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆದಿದೆಯೇ ಇಲ್ಲವೇ ಎಂಬದನ್ನು ನಾವು ಹೇಗೆ ತಿಳಿಯಬಲ್ಲೆವು. ನಾವು ಮಾನಸಾಂತರ ಪಟ್ಟು, ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿರುವೆವಾದರೆ ಅದು ನಿಶ್ಚಯವಾಗಿ ನಮಗೆ ತಿಳಿಯುವದು (ಯೋಹಾ. 3:3). ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ. ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ. ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು (ರೋಮ. 8:16).

ಯೇಸುಕ್ರಿಸ್ತನು ಪರಲೋಕದಲ್ಲಿ ನಮಗೆ ಸ್ಥಳವನ್ನು ಸಿದ್ಧಪಡಿಸಿದ್ದಾನೆ. ಭೂಲೋಕದಲ್ಲಿ ಪವಿತ್ರಾತ್ಮನು ನಮ್ಮನ್ನು ಆ ಸ್ಥಳಕ್ಕೆ ಸಿದ್ಧಗೊಳಿಸುವನು. ಈ ಪ್ರಪಂಚದಲ್ಲಿ ಅಕ್ರಮ, ಅನೀತಿ, ಅನ್ಯಾಯಗಳನ್ನು ನಾವು ಕಾಣುವಾಗ, ಆ ಮಹಿಮೆಯುಳ್ಳ ವಾಗ್ದಾನ ಮಾಡಲ್ಪಟ್ಟಂಥ ನಿತ್ಯರಾಜ್ಯವನ್ನು ಹಂಬಲಿಸದೆ ಇರುವವರು ಯಾರೂ ಇಲ್ಲ. ಅನೇಕರು ಒಂದು ಕೈಯಲ್ಲಿ ಈ ನಶ್ವರ ಪ್ರಪಂಚವನ್ನೂ ಮತ್ತೊಂದು ಕೈಯಲ್ಲಿ ನಿತ್ಯರಾಜ್ಯವನ್ನೂ ಹಿಡಿಯಲು ಯತ್ನಿಸುತ್ತಾರೆ. ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸು ಇರುವದು (ಮತ್ತಾ. 6:21).

ಒಬ್ಬ ಭಕ್ತನು ಒಬ್ಬ ಅರಸನ ಅರಮನೆಯಲ್ಲಿರಲು ಆಹ್ವಾನಿಸಲ್ಪಟ್ಟನು. ಒಂದು ದಿನ ಇಬ್ಬರೂ ಊರ ಹೊರಗೆ ಹೋಗಿ, ಅಲ್ಲಿ ಒಂದು ಬೆಟ್ಟವನ್ನು ಹತ್ತಿ ನಿಂತರು. ಆಗ ಅರಸನು ಭಕ್ತನಿಗೆ ಉತ್ತರ ದಿಕ್ಕನ್ನು ತೋರಿಸಿ, ಅಲ್ಲಿ ಮೇಯುತ್ತಿರುವ ಕುರಿಮಂದೆ ಎಲ್ಲವೂ ನನ್ನದೇ ಎಂದನು. ಪೂರ್ವವನ್ನು ತೋರಿಸಿ, ಅಲ್ಲಿ ಕಾಣುವ ತೋಪುಗಳು, ತೋಟಗಳು ಎಲ್ಲವೂ ನನ್ನದೇ ಎಂದನು. ಪಶ್ಚಿಮ ದಿಕ್ಕನ್ನು ತೋರಿಸಿ, ಅಲ್ಲಿ ಕಾಣುವ ಹೊಲ ಗದ್ದೆಗಳೆಲ್ಲವೂ ನನ್ನದೇ ಎಂದನು. ದಕ್ಷಿಣದ ಕಡೆ ತೋರಿಸಿ ಅಲ್ಲಿ ಮೇಯುತ್ತಿರುವ ದನಗಳೆಲ್ಲವೂ ನನ್ನದೇ ಎಂದನು. ಆಗ ಭಕ್ತನು ತನ್ನ ಕೈಯನ್ನೆತ್ತಿ ಆಕಾಶವನ್ನು ತೋರಿಸುತ್ತಾ "ಅಲ್ಲಿ ನಿಮಗೆ ಏನಾದರೂ ಇದೆಯೇ?" ಎಂದು ಅರಸನ ಬಳಿ ಕೇಳಿದನು. ನನಗೆ ಅಲ್ಲಿ ಏನೂ ಇಲ್ಲವಲ್ಲಾ, ಎಂದು ಅರಸನು ಬಹಳ ದು:ಖದಿಂದ ಹೇಳಿದನು. ತನಗೋಸ್ಕರ ದ್ರವ್ಯವನ್ನಿಟ್ಟುಕೊಂಡು ದೇವರ ವಿಷಯಗಳಲ್ಲಿ ಐಶ್ವರ್ಯವಂತನಾಗದೆ ಇರುವವನು ಅವನಂತೆಯೇ ಇದ್ದಾನೆ. ಎಂದು ಸ್ವಾಮಿ ಹೇಳಿದ್ದಾನೆ ಮತ್ತು ಅವನನ್ನು ಬುದ್ಧಿಹೀನನೆಂದು ಕರೆದಿದ್ದಾನೆ. ನೀವು ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ ನಿಮ್ಮ ಹಿರಿಯರು ದೇವರ ಕೋಪವನ್ನೆಬ್ಬಿಸಿದ ಸ್ಥಳದಲ್ಲಿ ಮಾಡಿದಂತೆ ನಿಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳಬೇಡಿರಿ (ಇಬ್ರಿ. 3:15). ಆದ್ದರಿಂದ ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು. ನಿಮ್ಮಲ್ಲಿ ಒಬ್ಬರಾದರೂ ಪಾಪದಿಂದ ಮೋಸಹೋಗಬಾರದು. ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ. ಒಳ್ಳೆಯ ಸಂದರ್ಭವನ್ನು ಕಳೆದುಕೊಳ್ಳಬೇಡಿರಿ. ಇನ್ನು ತಾಮಸವಾಗದು, ನರಕಕ್ಕೆ ಪಾತ್ರರಾಗದಿರಿ.

ಸಂಗ್ರಹ.

ನಿನ್ನ ಸತ್ಯತೆಯನ್ನು ನನ್ನ ದೃಷ್ಟಿಯಲ್ಲೇ ಇಟ್ಟುಕೊಂಡು ನಡೆಯುವೆನು
(ಕೀರ್ತ. ೮೬:11).

# ಸೌಂದರ್ಯಕ್ಕೆ ಇರಲಿ ಲಿಂಬೆ ಗುಣ

ಆರೋಗ್ಯ ಸ್ವರ

ಲಿಂಬೆ ಆಹಾರಕ್ಕೆ ಗುಣವನ್ನು ಬೆರೆಸುವ ಜೊತೆಗೆ ಚರ್ಮ ಮತ್ತು ಕೂದಲಿಗೂ ಹೊಳಪನ್ನು ನೀಡಬಲ್ಲದು ಎನ್ನುವುದು ನಿಮಗೆ ಗೊತ್ತೆ? ಲಿಂಬೆಯನ್ನು ವಿಭಿನ್ನವಾಗಿ ಸೌಂದರ್ಯ ಪಾಕದಲ್ಲಿ ಬಳಸಲಾಗುತ್ತದೆ. ಉಗುರುಗಳ ರಕ್ಷಣೆಗೂ ನಿಂಬೆ ಉಪಯೋಗವಾಗುತ್ತದೆ.

ಮುಖದಲ್ಲಿ ಅತಿಯಾಗಿ ಕಪ್ಪು ಕಲೆಗಳಿದ್ದು, ಯಾವುದೇ ಸೌಂದರ್ಯ ಉತ್ಪನ್ನದಿಂದಲೂ ಹೋಗದಿದ್ದಲ್ಲಿ ಲಿಂಬೆ ರಸ ಪರಿಣಾಮಕಾರಿ ಔಷಧಿ. ಹತ್ತಿಯಲ್ಲಿ ರಸವನ್ನು ತೆಗೆದು ನಿಧಾನವಾಗಿ ಮುಖಕ್ಕೆ ದಿನ ಬಿಟ್ಟು ದಿನ ಹಚ್ಚಿಕೊಂಡರೆ ಸಾಕು. ಚರ್ಮ ಅತಿಯಾಗಿ ಒಣಗಿದ್ದರೆ ಮತ್ತು ಸಿಪ್ಪೆ ಎದ್ದಿದ್ದರೆ ಸಾಮಾನ್ಯ ಮಾಯಿಶ್ಚರೈಸರ್ ಬದಲಾಗಿ ಲಿಂಬೆ ರಸಕ್ಕೆ ಸ್ವಲ್ಪ ಜೇನು ಬೆರೆಸಿ ಮುಖವಿಡೀ ಹಚ್ಚಿಕೊಳ್ಳಿ. ಕೈಗಳು ಮತ್ತು ಕಾಲುಗಳಿಗೂ ಹಚ್ಚಿ ಈ ಪೇಸ್ಟ್ ಹೆಚ್ಚು ದಪ್ಪವಾಗಿದ್ದಲ್ಲಿ ಸ್ವಲ್ಪ ನೀರು ಬೆರೆಸಿಕೊಳ್ಳಬಹುದು.

ತೆಂಗಿನಕಾಯಿ ನೀರಿನ ಜೊತೆ ಲಿಂಬೆ ರಸವನ್ನು ಸೇರಿಸಿ ಬೆಳಗಿನ ಜಾವ ಮುಖ ತೊಳೆದಲ್ಲಿ ಚರ್ಮಕ್ಕೆ ತಾಜಾ ಅನುಭವವಾಗುತ್ತದೆ. ಮಂಡಿಗಳು, ಕೈಗಳು ಮತ್ತು ಪಾದಗಳಲ್ಲಿ ಕರಿ ಛಾಯೆಗಳಿದ್ದಲ್ಲಿ ಲಿಂಬೆ ರಸ ಉಜ್ಜಿ ನಿವಾರಿಸಿಕೊಳ್ಳಬಹುದು. ಬಾದಾಮಿ ತೈಲದ ಜೊತೆಗೆ ಲಿಂಬೆ ರಸವನ್ನು ಸೇರಿಸಿ ಉಗುರುಗಳಿಗೆ ಹಚ್ಚಿ 20 ನಿಮಿಷವಿಟ್ಟು ಹದವಾದ ಬಿಸಿ ನೀರಲ್ಲಿ ತೊಳೆಯಿರಿ. ಉಗುರುಗಳಿಗೆ ಇನ್ಯಾವುದೇ ಸೌಂದರ್ಯ ಚಿಕಿತ್ಸೆಯ ಅಗತ್ಯವಿಲ್ಲ.

ಸಂಗ್ರಹ.

# ಮುಂಜಾನೆ ನೀರನ್ನು ಕುಡಿಯುವುದರಿಂದ ಸಿಗುವ ಪ್ರಯೋಜನಗಳು

ಬೆಳಿಗ್ಗೆ ಖಾಲಿ ಹೊಟ್ಟೆಗೆ ನೀರನ್ನು ಕುಡಿಯುವುದರಿಂದ ನಮ್ಮ ದೇಹಕ್ಕೆ ಬಹಳಷ್ಟು ಪ್ರಯೋಜನವಿದೆ. ಆದರೆ ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ವಿಚಾರಗಳಲ್ಲಿ ನಾವು ಗೊಂದಲ ಮಾಡಿಕೊಳ್ಳುತ್ತೇವೆ. ನಮ್ಮ ಆರೊಗ್ಯ ರಕ್ಷಣೆಯ ನಿಟ್ಟಿನಲ್ಲಿ ತೆಗೆದುಕೊಳ್ಳುವ ಕೆಲವು ಸರಳ ಸೂತ್ರಗಳು, ಆರೋಗ್ಯವನ್ನು ಸುಧಾರಿಸುವಲ್ಲಿ ಬಹಳಷ್ಟು ಉತ್ತಮ ಪರಿಣಾಮವನ್ನು ನೀಡಬಲ್ಲವು. ಇವುಗಳಲ್ಲಿ ಒಂದು ಬೆಳಿಗ್ಗೆ ಖಾಲಿ ಹೊಟ್ಟೆಗೆ ಸಾಕಷ್ಟು ನೀರನ್ನು ಸೇವಿಸುವದು. ಇದರಿಂದ ನಿಮ್ಮ ಹೊಟ್ಟೆಯು ಬಹಳ ಚೆನ್ನಾಗಿ ಖಾಲಿ ಆಗುವದಷ್ಟೇ ಅಲ್ಲದೆ, ಅನೇಕ ರೀತಿಯ ಅಪಾಯಕಾರಿ ಕಾಯಿಲೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಇದು ಬಹಳಷ್ಟು ಪ್ರಯೋಜನಕಾರಿ.

1. ಬೆಳಿಗ್ಗೆ ಖಾಲಿ ಹೊಟ್ಟೆಗೆ ನೀರನ್ನು ಕುಡಿಯುವುದರಿಂದ ದೊಡ್ಡ ಕರುಳು ಚೆನ್ನಾಗಿ ಸಡಿಲವಾಗುತ್ತದೆ ಮತ್ತು ಇದರಿಂದ ಪೋಷಕಾಂಶಗಳನ್ನು ಸುಲಭವಾಗಿ ಹೀರಿಕೊಳ್ಳಲು ಸಹಾಯವಾಗುತ್ತದೆ.
2. ಹೊಸ ರಕ್ತ ಮತ್ತು ಸ್ನಾಯು ಕೋಶಗಳ ಸಂರಚನೆ ಸಾಧ್ಯವಾಗುತ್ತದೆ.
3. ದೇಹದ ತೂಕ ಇಳಿಸಿಕೊಳ್ಳಲು ಅವಶ್ಯಕ. ಬೆಳಿಗ್ಗೆ ಖಾಲಿ ಹೊಟ್ಟೆಗೆ ನೀರನ್ನು ಕುಡಿಯುವುದರಿಂದ ನಿಮ್ಮ ಚಯಾಪಚಯ ಕ್ರಿಯೆಯು ಉತ್ತಮಗೊಳ್ಳುತ್ತದೆ.
4. ಆರೋಗ್ಯಶಾಲಿಯಾಗಿ ಕಾಣುವ ಚರ್ಮ, ನೀರು ರಕ್ತದಲ್ಲಿನ ವಿಷವನ್ನು ತೊಡೆದು ಹಾಕಲು ಸಹಾಯ ಮಾಡುತ್ತದೆ. ಇದರಿಂದ ನಿಮ್ಮ ಚರ್ಮವು ತಿಳಿಗೊಳ್ಳುತ್ತದೆ ಮತ್ತು ನಯವಾಗಿ ಹೊಳೆಯುತ್ತಿರುತ್ತದೆ.
5. ನಿಮ್ಮ ದುಗ್ಧಗ್ರಂಥಿ ವ್ಯೂಹವನ್ನು ಸಮತೋಲನದಲ್ಲಿ ಇಡುತ್ತದೆ. ಈ ಗ್ರಂಥಿಗಳು ನಿಮ್ಮ ದೈನಂದಿನ ಚಟುವಟಿಕೆಗಳನ್ನು ನಡೆಸಲು ಸಹಾಯಮಾಡುತ್ತದೆ. ನಿಮ್ಮ ದೇಹದ ದ್ರವಾಂಶವನ್ನು ಸಮತೋಲನದಲ್ಲಿ ಇಡುತ್ತವೆ ಮತ್ತು ರೋಗಾಣುಗಳ ವಿರುದ್ಧ ಹೋರಾಡುತ್ತವೆ.

**ತಣ್ಣಗಿನ ನೀರನ್ನು ಕುಡಿಯುಬಹುದಾದ ಉತ್ತಮ ಸಂದರ್ಭಗಳು :–**

**ವ್ಯಾಯಾಮ :** ವ್ಯಾಯಾಮ ಮಾಡುವ ಸಮಯದಲ್ಲಿ ದೇಹದ ಸಂಪೂರ್ಣ ಉಷ್ಣತೆಯು ಏರುತ್ತದೆ. ಬೆವರುವಿಕೆ ಎನ್ನುವುದು ನಮ್ಮ ದೇಹವನ್ನು ತಂಪಾಗಿ ಇಡಲು ನಮ್ಮ ದೇಹವು ಬಳಸುವ ಒಂದು ಕಾಯ ತಂತ್ರ. ಆದರೆ ಬೆವರಿನ ಮೂಲಕ ನಾವು

ನಾನು ನಿನ್ನ ನಾಮದಲ್ಲಿ ಭಯಭಕ್ತಿಯಿಂದಿರುವಂತೆ ಏಕಮನಸ್ಸನ್ನು ಅನುಗ್ರಹಿಸು (ಕೀರ್ತ. 86:11).

ಬಹಳಷ್ಟು ನೀರು ಮತ್ತು ಎಲೆಕ್ಟ್ರೋಲೈಟ್‌ಗಳನ್ನು ಕಳೆದುಕೊಳ್ಳುತ್ತವೆ ಮತ್ತು ಇವುಗಳನ್ನು ಮರುಪೂರಣ ಮಾಡುವುದು ಬಹಳ ಅವಶ್ಯಕ. ವ್ಯಾಯಾಮ ಮಾಡುವ ಸಮಯದಲ್ಲಿ ನೀರನ್ನು ಗುಟುಕು ಗುಟುಕಾಗಿ ಕುಡಿಯುವುದರಿಂದ, ಸಂಪೂರ್ಣ ದೇಹದ ಏರಿದ ತಾಪಮಾನವನ್ನು ತಗ್ಗಿಸಿ, ದೇಹವನ್ನು ತಂಪಾಗಿ ಇಡಲು ಮತ್ತು ದೇಹಕ್ಕೆ ನೀರಿನ ಮರುಪೂರಣ ಮಾಡಲು ಸಹಾಯವಾಗುತ್ತದೆ.

**ಜ್ವರ :** ಜ್ವರ ಇರುವಾಗ ತಂಪು ನೀರನ್ನು ಕುಡಿದು ದೇಹ ತಾಪಮಾನವನ್ನು ಇಳಿಸಿಕೊಳ್ಳುವುದು ಒಂದು ಉತ್ತಮ ಉಪಾಯ. ಜ್ವರ ಬಂದಿರುವ ಸಮಯದಲ್ಲಿ ಶರೀರವು ನನ್ನನ್ನು ಆಕ್ರಮಿಸಿರುವ ರೋಗಾಣುಗಳ ವಿರುದ್ಧ ತೀವ್ರವಾದ ಹೋರಾಟದಲ್ಲಿ ತೊಡಗಿರುತ್ತದೆ. ಅಂದರೆ ಜ್ವರದ ಸಂದರ್ಭದಲ್ಲಿ ಶರೀರವು ವಿಶೇಷವಾಗಿ ಬಿಸಿಯೇರಿದ್ದರೆ ತಂಪು ನೀರನ್ನು ಕುಡಿಯುವದರಿಂದ ಬಹಳಷ್ಟು ಉಪಶಮನ ದೊರಕುತ್ತದೆ.

**ತೂಕ ಇಳಿಸಲು :–** ತಣ್ಣಗಿನ ನೀರು ಚಯಾಪಚಯ ಕ್ರಿಯೆಯನ್ನು ಉತ್ತೇಜಿಸುವುದು ಮತ್ತು ದಿನ ಒಂದರಲ್ಲಿ ಹೆಚ್ಚುವರಿ 70 ಕ್ಯಾಲರಿಯಷ್ಟನ್ನು ನಿವಾರಿಸುವದು ಕಂಡು ಬಂದಿದೆ.

**ಬಿಸಿ ನೀರನ್ನು ಕುಡಿಯಬಹುದಾದ ಉತ್ತಮ ಸಂದರ್ಭಗಳು:**

**ಜೀಣಕ್ರಿಯೆಗೆ :–** ಬೆಳಗಿನ ಹೊತ್ತು ಬೆಚ್ಚನೆಯ ನೀರನ್ನು ಕುಡಿಯುವುದರಿಂದ ಜೀರ್ಣಕ್ರಿಯೆಯ ಪ್ರಚೋದನೆಗೆ ಸಹಾಯವಾಗುತ್ತದೆ. ಊಟದ ಜತೆಗೆ ತಣ್ಣೀರನ್ನು ಕುಡಿಯುವುದರಿಂದ ಜೀರ್ಣಕ್ರಿಯೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದು ಮತ್ತು ತಣ್ಣಗಿನ ಆಹಾರ ಮತ್ತು ಪಾನೀಯಗಳನ್ನು ಬಿಸಿಗೊಳಿಸಲು ದೇಹಕ್ಕೆ ಬಹಳಷ್ಟು ಸಮಯಬೇಕಾಗುತ್ತದೆ ಮತ್ತು ಇದರಿಂದ ಜೀರ್ಣಕ್ರಿಯೆ ಮತ್ತು ದೇಹ ಗತವಾಗುವಿಕೆ ನಿಧಾನವಾಗುತ್ತದೆ.

**ನೋವು ನಿವಾರಣೆ :–** ನೀವು ತಲೆನೋವು ಅಥವಾ ಉರಿಯೂತದಿಂದ ಬಳಲುತ್ತಿರುವಾಗ, ಬೆಚ್ಚನೆಯ ಅಥವಾ ಬಿಸಿ ನೀರನ್ನು ಕುಡಿಯುವದು ಒಳ್ಳೇಯದು. ಯಾಕಂದರೆ ಬಿಸಿ ನೀರು ಅಂಗಾಂಶಗಳಿಗೆ ರಕ್ತದ ಹರಿಯುವಿಕೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಋತುಸ್ರಾವದ ಅವಧಿಯ ಸೆಳೆತಗಳನ್ನು ತಗ್ಗಿಸಲು ಬಿಸಿ ನೀರನ್ನು ಕುಡಿಯುವುದು ಅತ್ಯುತ್ತಮ ಪರಿಹಾರೋಪಾಯ.

ಸಂಗ್ರಹ.

---

## ಡಿಜಿಎಮ್ ಬೇತೇಲ್

# 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

### ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ, ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0091 820 2559886**

ಕರ್ತನೇ, ನನ್ನ ದೇವರೇ, ಮನಃಪೂರ್ವಕವಾಗಿ ನಿನ್ನನ್ನು ಕೊಂಡಾಡುವೆನು;
ಎಂದೆಂದಿಗೂ ನಿನ್ನ ನಾಮವನ್ನು ಘನಪಡಿಸುವೆನು (ಕೀರ್ತ. 86:13).

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಈಶಾನ್ಯ ರಾಜ್ಯವಾದ ನಾಗಾಲ್ಯಾಂಡ್‌ನಲ್ಲಿ ಬಂಡುಕೋರರ ಅಟ್ಟಹಾಸಕ್ಕೆ ಅಂತ್ಯಹಾಡುವ ನಿಟ್ಟಿನಿಂದ ಎನ್‌ಎಸ್‌ಸಿಎನ್‌ಐಎಂ (ನ್ಯಾಷನಲ್ ಸೋಶಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್, ಇಸಾಕ್–ಮುಯ್ವಾ) ಸಂಘಟನೆಯ ಜತೆ ಕೇಂದ್ರ ಸರಕಾರ ಮಹತ್ವದ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಐತಿಹಾಸಿಕ ಎಂದು ಬಣ್ಣಿಸಿದ್ದಾರೆ.
- ಕೊಮೆನ್' ಚಂಡಮಾರುತದ ಹೊಡೆತಕ್ಕೆ ತತ್ತರಿಸಿದ ಬಾಂಗ್ಲಾದೇಶ – ದಕ್ಷಿಣ ಆಫ್ರಿಕಾ ನಡುವಿನ ದ್ವಿತೀಯ ಹಾಗೂ ಅಂತಿಮ ಟೆಸ್ಟ್ ಪಂದ್ಯ ಮೊದಲ ದಿನದಾಟಕ್ಕಷ್ಟೇ ಸೀಮಿತಗೊಂಡು ಡ್ರಾದಲ್ಲಿ ಅಂತ್ಯಕಂಡಿದೆ.
- ಇಡೀ ವಿಶ್ವವನ್ನೇ ಬೆಚ್ಚಿಬೀಳಿಸಿರುವ ಆ್ಯಥ್ಲೀಟ್‌ಗಳ ಮಾದಕವಸ್ತು ಜಾಲದಲ್ಲಿ ಐವರು ಭಾರತೀಯ ಆ್ಯಥ್ಲೀಟ್‌ಗಳು ಇದ್ದಾರೆ ಎಂಬ ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಸಂಶಯಾಸ್ಪದ ರಕ್ತಪರೀಕ್ಷೆ ವರದಿ ಹೊಂದಿರುವ ಆ್ಯಥ್ಲೀಟ್‌ಗಳ ಕುರಿತು ಬ್ರಿಟನ್‌ನ 'ಸಂಡೇ ಟೈಮ್ಸ್' ಮತ್ತು ಜರ್ಮನಿಯ ಎಡಿಆರ್ ಮಾಡಿರುವ ವರದಿಯಲ್ಲಿ ಐವರು ಭಾರತೀಯರೂ ಇದ್ದಾರೆ ಎಂದು ಹೇಳಲಾಗಿದೆ.
- ಹಾಲು ಒಕ್ಕೂಟಗಳ ಆರ್ಥಿಕ ಸಂಕಷ್ಟ ದೂರ ಮಾಡುವ ನಿಟ್ಟಿನಲ್ಲಿ ವಾರದ ಐದು ದಿನ ಶಾಲಾ ಮಕ್ಕಳಿಗೆ ಕ್ಷೀರ ಭಾಗ್ಯಯೋಜನೆ ಜಾರಿ, ಹಾಲಿನ ಉಪ ಉತ್ಪನ್ನಗಳ ಉತ್ಪಾದನೆ ಹೆಚ್ಚಿಸುವುದು, ನಷ್ಟದಲ್ಲಿರುವ ಒಕ್ಕೂಟಗಳಿಗೆ ಸಹಾಯಧನ ನೀಡುವದು ಹಾಗೂ ಜೂನ್‌ವರೆಗೆ ಪ್ರತಿ ಲೀಟರ್‌ಗೆ ನಾಲ್ಕು ರೂ. ಹಾಲಿನ ಪ್ರೋತ್ಸಾಹ ಧನದ ಬಾಕಿ ಮೊತ್ತವನ್ನು ತತ್‌ಕ್ಷಣ ಬಿಡುಗಡೆ ಮಾಡುವ ನಿರ್ಧಾರವನ್ನು ಸರಕಾರ ಕೈಗೊಂಡಿದೆ.
- ಸುಮಾರು 500 ವರ್ಷಗಳಷ್ಟು ಪುರಾತನವಾದ ಅಕ್ಬರ್ ಕಾಲದ ಚಿನ್ನ ಲೇಪಿತ ಬೆಲೆ ಬಾಳುವ ಕುರಾನ್ ಗ್ರಂಥವನ್ನು ಮೈಸೂರು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಮಾಧ್ಯಮದ ವರದಿ ತಿಳಿಸಿದೆ.
- ಭೀಕರ ಚಂಡಮಾರುತದ ದೃಶ್ಯವನ್ನು ಕಾರಿನಲ್ಲಿ ಕುಳಿತು ಸೆರೆಹಿಡಿಯುತ್ತಿದ್ದಾಗಲೇ ಆತನ ಕಾರಿನ ಬಾನೆಟ್ ಮೇಲೆ ಕಸದ ರಾಶಿ ಬೀಳುತ್ತಿದ್ದರೆ, ಆತನ ಕಣ್ಣೆದುರು ಕಾರೊಂದು ತರಗಲೆಯಂತೆ ಹಾರಿ ಹೋಗಿದೆ. ಈ ಘಟನೆ ನಡೆದಿರುವುದು ತೈವಾನ್ ನಗರದ ಯಾಂಗ್ ಚೆಂಗ್ ರಸ್ತೆಯಲ್ಲಿ ತೈವಾನ್‌ನಲ್ಲಿನ ಭೀಕರ ಚಂಡಮಾರುತದಲ್ಲಿ ಸುಮಾರು 21 ಮಂದಿ ಸಾವನ್ನಪ್ಪಿದ್ದಾರೆ.
- ಭಾರತದಲ್ಲಿ ತನ್ನ ಉತ್ಪನ್ನಗಳಿಗೆ ನಿಷೇಧ ಏರಿ ತಿಂಗಳು ಕಳೆದರೂ ಹೆಚ್ಚೇನೂ ಪ್ರತಿಕ್ರಿಯೆ ನೀಡಿರದ, ನೆಸ್ಲೆ ಅಧ್ಯಕ್ಷ ಪೀಟರ್ ಬ್ರಾಬೆಕ್ ಇದೇ ಮೊದಲ ಬಾರಿಗೆ ಭಾರತದ ವಿರುದ್ಧ ಹರಿಹಾಯಿದ್ದಾರೆ. ಭಾರತದ ಅಧಿಕಾರಿಗಳ ವರ್ತನೆಯಿಂದಾಗಿ ನಾವು 29.000 ಟನ್‌ಗಳಷ್ಟು ನೂಡಲ್ಸ್ ಅನ್ನು ಸುಡುವಂತಾಯಿತು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

---

## ಪ್ರಾರ್ಥನಾ ಮನವಿಗಳು

- **ಭಾರತ ದೇಶದಲ್ಲಿ ಸಮಾಧಾನ, ರಕ್ಷಣೆ, ಭದ್ರತೆ ನಿರ್ದಿಷ್ಟವಾಗಿ ಪಕ್ಕದ ದೇಶಗಳಿಂದ ಯಾವುದೇ ಸಮಸ್ಯೆಗಳು ಬರದಂತೆ ಪ್ರಾರ್ಥಿಸೋಣ.**
- **ಒಳನಾಡಿನಲ್ಲಿ ಜಾತಿಯ ಗಲಿಬಿಲಿ, ಭಾಷೆಯ ಸಮಸ್ಯೆಗಳು ಬಾರದ ಹಾಗೆ**
- **ಸೇವಕರು, ಬೋಧಕರು, ವಿಶ್ವಾಸಿಗಳ ನಡುವೆ ಪ್ರೀತಿ, ಐಕ್ಯತೆ, ಒಗ್ಗಟ್ಟು ಹೆಚ್ಚಾಗುವಂತೆ**
- **ಸುವಾರ್ತೆ ವಿರೋಧ ಸಂಸ್ಥೆಗಳಿಗಾಗಿಯೂ ಅದರ ನಾಯಕರಿಗಾಗಿಯೂ, ಇವರ ಕೆಟ್ಟ ಆಲೋಚನೆಗಳೆಂದೂ ಜಾರಿಗೆ ಬರದಂತೆ ಪ್ರಾರ್ಥಿಸೋಣ.**
- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯ ಮೂಲಕ ಅನೇಕರು ರಕ್ಷಿಸಲ್ಪಡುವಂತೆ ಪ್ರಾರ್ಥಿಸಿರಿ.**
- **ದೇವರ ಸ್ವರ ಮಾಸ ಪತ್ರಿಕೆಯು ಕರ್ತನ ಮಹಿಮೆಗಾಗಿ ಉತ್ತಮವಾದ ರೀತಿಯಲ್ಲಿ ಮುದ್ರಣವಾಗುವಂತೆ ಪ್ರಾರ್ಥಿಸಿರಿ.**

ಯಾವಾಗಲೂ ನಿನ್ನ ನಾಮದಲ್ಲಿ ಆನಂದಿಸುತ್ತಾರೆ;
ನಿನ್ನ ನೀತಿಯಿಂದ ಏಳಿಗೆ ಹೊಂದುತ್ತಾರೆ (ಕೀರ್ತ. 89:16).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.
**ಮೊಬೈಲ್ : 0091 9902334941**

---

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

### ಆಶ್ರಮದ ಅವಶ್ಯಕತೆಗಳು

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**0091 9902334941, 0091 8202002781, 0091 9964070654**

---

ಪರಿಶುದ್ಧ ತೈಲದಿಂದ ಅವನನ್ನು ಅಭಿಷೇಕಿಸಿದ್ದೇನೆ. ನನ್ನ ಹಸ್ತವು ಅವನ ಮೇಲೆ ಸ್ಥಿರವಾಗಿರುವದು
(ಕೀರ್ತ. 89:20–21).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**5) ಉಪದೇಶದಲ್ಲಿ ತ್ರಯೇಕ ದೇವರ ವಾಕ್ಯವನ್ನು ನೋಡೋಣ:–**

1) ತ್ರಯೇಕತ್ವದ ಪ್ರಥಮ ವ್ಯಕ್ತಿಯಾಗಿರುವ ತಂದೆಯಾದ ದೇವರು ಮಾತನಾಡುತ್ತಾನೆ ಯೆಹೋವನು ಇಂತೆನ್ನುತ್ತಾನೆ (ಆಮೋ. 9:7).

2) ತ್ರಯೇಕತ್ವದ ದ್ವೀತಿಯ ವ್ಯಕ್ತಿಯಾದ ಯೇಸುಕ್ರಿಸ್ತನು ಮಾತನಾಡುತ್ತಿದ್ದಾನೆ, ನಿನಗೆ ನಿಜ ನಿಜವಾಗಿ ಹೇಳುತ್ತೇನೆ (ಯೋಹಾ. 3:3).

3) ತ್ರಯೇಕತ್ವದ 3ನೇಯ ವ್ಯಕ್ತಿಯಾಗಿರುವ ಪವಿತ್ರಾತ್ಮನು ಮಾತನಾಡುತ್ತಿದ್ದಾನೆ (ಅ.ಕೃ. 21:11, 13:1–3).

**1) ಅನ್ಯೋನ್ಯತೆ ಕುರಿತು ತ್ರಯೇಕ ದೇವರ ಪಾತ್ರವನ್ನು ಕಾಣಬಹುದು:–**

1) ತಂದೆಯಾದ ದೇವರ ಸಂಗಡ ಅನ್ಯೋನ್ಯತೆ (ತ್ರಯೇಕತ್ವದ ಪ್ರಥಮ ವ್ಯಕ್ತಿ) (1 ಯೋಹಾ. 1:3).

2) ಮಗನಾದ ದೇವರಾದ ಯೇಸುಕ್ರಿಸ್ತನ ಸಂಗಡ ಅನ್ಯೋನ್ಯತೆ (ತ್ರಯೇಕತ್ವದ ದ್ವೀತಿಯ ವ್ಯಕ್ತಿ) (1 ಕೊರಿ. 1:9).

3) ಪವಿತ್ರಾತ್ಮ ದೇವರ ಸಂಗಡ ಅನ್ಯೋನ್ಯತೆ (ತ್ರಯೇಕತ್ವದ ತೃತೀಯ ವ್ಯಕ್ತಿಯ ಸಂಗಡ ಅನ್ಯೋನ್ಯತೆ) (ಫಿಲಿ. 2:1).

**2) ಪ್ರಾರ್ಥನೆಯಲ್ಲಿ ತ್ರಯೇಕ ದೇವರ ಪಾತ್ರವನ್ನು ಗಮನಿಸಬಹುದು :–**

1) ನಾವು ತಂದೆಯಾದ ದೇವರಿಗೆ ಪ್ರಾರ್ಥಿಸಬೇಕು (ಯೋಹಾ. 15:16).

2) ಮಗನಾದ ದೇವರ ಹೆಸರಿನಲ್ಲಿ ಪ್ರಾರ್ಥಿಸುವುದು (ಯೋಹಾ. 16:23–24, 14:14).

3) ಪವಿತ್ರಾತ್ಮ ದೇವರ ಮೂಲಕ ಪ್ರಾರ್ಥಿಸುವುದು (ಯೂದ. 1:20).

**3) "ಆತನ ಮೂಲಕ (ಕರ್ತನಾದ ಯೇಸುಕ್ರಿಸ್ತನ ಮೂಲಕ) ನಾವೂ, ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವುದಕ್ಕೆ ಮಾರ್ಗವಾಯಿತು.**

ಮೇಲಿನ ಎಲ್ಲಾ ವಾಕ್ಯಗಳನ್ನು ನಾವು ಸ್ಪಷ್ಟವಾಗಿ ಗಮನಿಸುವುದಾದರೆ ದೇವರಿಗೆ ಮೂರು ವಿಧವಾದ ವ್ಯಕ್ತಿತ್ವಗಳು ಇರುವುದನ್ನು ಕಾಣಬಹುದು. ಸತ್ಯವೇದದಲ್ಲಿ ದೇವರ ಮೂರು ಭಿನ್ನವಾದ ವ್ಯಕ್ತಿತ್ವಗಳು ಬೇರೆ ಬೇರೆ ಪಾತ್ರಗಳನ್ನು ಮಾಡುವುದನ್ನು ನಾವು ಕಾಣಬಹುದು. ಮೂರು ದೇವರು ಅಲ್ಲ, ಒಬ್ಬನೇ ದೇವರಲ್ಲಿರುವ ಮೂರು ವ್ಯಕ್ತಿತ್ವಗಳನ್ನು ನಾವು ಸತ್ಯವೇದದಲ್ಲಿ ಕಾಣುತ್ತೇವೆ ಇದೇ ರಹಸ್ಯವಾಗಿದೆ. ಅಪೋಸ್ತಲನಾದ ಪೌಲನು ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ ದೇವರ ಮುಖವು ನಮಗೆ ಮೊಬ್ಬಾಗಿ ಕಾಣಿಸುತ್ತದೆ ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು. ಈಗ ಸ್ವಲ್ಪ ಮಾತ್ರ ನಮಗೆ ತಿಳಿದಿದೆ. ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಂಡಂತೆ ನಾನು ಸಂಪೂರ್ಣವಾಗಿ ತಿಳುಕೊಳ್ಳುವೆನು (1 ಕೊರಿ. 13:12).

ಯೋಹಾ. 14:26, 15:26ರಲ್ಲಿ ತಂದೆ, ಮಗನಾದ ಯೇಸು, ಪವಿತ್ರಾತ್ಮ ಭಿನ್ನವಾದ ವ್ಯಕ್ತಿಗಳೆಂದು ಕಾಣಬಹುದು.

ಯೇಸುವು ತನ್ನ ಶಿಷ್ಯರಿಗೆ ಕೊಟ್ಟಂತಹ ಆಜ್ಞೆಯನ್ನು ಈಗ ನೋಡೋಣ, ಇದನ್ನು ಯೇಸುವು ಭೂಲೋಕವನ್ನು ಬಿಡುವ ಮೊದಲು ತನ್ನ ಶಿಷ್ಯರಿಗೆ ಕೊಟ್ಟ ಕೊನೆಯ ಆಜ್ಞೆಯಾಗಿರುವುದರಿಂದ ಇದು ಅತೀ ಪ್ರಾಮುಖ್ಯವಾದದ್ದಾಗಿದೆ.

ಆದ್ದರಿಂದ ನೀವು ಮೊದಲು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ (ಮತ್ತಾ. 28:19).

ಮೇಲಿನ ವಾಕ್ಯದಲ್ಲಿ ನಾವು ಮುಖ್ಯ ಸತ್ಯಾಂಶಗಳನ್ನು ಕಾಣಬಹುದು :–

1) ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ ಎಂದು ಯೇಸು ಹೇಳುವಾಗ ತ್ರಯೇಕತ್ವವನ್ನು ಆತನು ಎತ್ತಿ ಹಿಡಿದಿದ್ದಾನೆ.

2) ಇಲ್ಲಿ ಹೆಸರು ಎನ್ನುವುದು ಬೇರೆ ಕಡೆಗಳಲ್ಲಿದ್ದಂತೆ ದೈವತ್ವಕ್ಕೆ ಸಂಬಂಧಿಸಿದ್ದು ಅದು ಏಕ ವಚನದಲ್ಲಿದೆ. ಆದ್ದರಿಂದ ತ್ರಯೇಕ ದೇವರು 3 ಭಿನ್ನವಾದ ವ್ಯಕ್ತಿತ್ವಗಳುಳ್ಳವನಾದರೂ ಒಬ್ಬನೇ ದೇವರೆಂದು, ಒಂದೇ ಹೆಸರಿನಲ್ಲಿ ಮೂರು ವ್ಯಕ್ತಿತ್ವಗಳನ್ನು ಸೂಚಿಸುವದು.

3) ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ಎಂದು ಹೇಳುವಾಗ ಅವರು ತ್ರಯೇಕ ವ್ಯಕ್ತಿಗಳಾಗಿದ್ದಾರೆಂಬುದನ್ನು ಖಚಿತ ಪಡಿಸುತ್ತದೆ.

ನನ್ನ ನಂಬಿಗಸ್ತಿಕೆಯಿಂದ ಜಾರುವದಿಲ್ಲ. ನನ್ನ ಒಡಂಬಡಿಕೆಯನ್ನು ಭಂಗಪಡಿಸುವದಿಲ್ಲ (ಕೀರ್ತ. 89:34).

4) ಯೇಸುವು ತನ್ನ ಶಿಷ್ಯರಿಗೆ ತಾನು ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿ ಕೊಳ್ಳುವುದಕ್ಕೆ ಆಜ್ಞಾಪಿಸಿದನು. ಈ ಆಜ್ಞೆಯಲ್ಲಿ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವದು ಸೇರಿದೆಯಲ್ಲವೇ. ಈ ಆಜ್ಞೆಯನ್ನು ಕಡೆಗಣಿಸಿ ಯೇಸುವು ಹೇಳಿದಂತೆ ಮಾಡಲು ಒಪ್ಪದಿರುವುದು ಯೇಸುನಾಮ ಪಂಗಡದವರು. ದೇವರ ವಾಕ್ಯಕ್ಕೆ ವಿರುದ್ಧವಾದುದಲ್ಲವೇ? ಇದನ್ನು ಸಮರ್ಥಿಸಲು ತಂದೆಯೂ, ಪವಿತ್ರಾತ್ಮನೂ, ಮಗನೂ ವ್ಯಕ್ತಿಗಳಲ್ಲ ಮತ್ತು ಹೆಸರುಗಳಲ್ಲ ಅವು ಪದವಿಗಳೆಂದು ಹೇಳುವುದರಿಂದ ಸುಳ್ಳಾದ ಉಪದೇಶವನ್ನು ಹರಡುವರು.

ದೇವರನ್ನು ಯಾರು ಕಂಡಿಲ್ಲ, ಯಾವನು ಏಕಪುತ್ರನೂ ಸ್ವತ: ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು (ಯೋಹಾ. 1:18).

ಯೇಸುನಾಮ ಪಂಗಡದವರು ಯೇಸುವೆ ತಂದೆಯಾದ ದೇವರು ಮತ್ತು ಪರಿಶುದ್ಧಾತ್ಮನೆ ಯೇಸು ಇವೆಲ್ಲಾ ಯೇಸುವಿನ ಕುರಿತು ಹೇಳುವಂತದ್ದು ಎಂದು ಹೇಳಿ ದೇವರ ತ್ರಯೇಕತ್ವವನ್ನು ಅಲ್ಲಗಳೆಯುತ್ತಾರೆ.

ಕರ್ತನಾದ ಯೇಸುಕ್ರಿಸ್ತನಿಗೆ ಯೇಸು ಎಂಬ ಹೆಸರು ಅನಾದಿಯಿಂದ ಇದ್ದದ್ದಲ್ಲ, ಅದು ಈ ಲೋಕದಲ್ಲಿ ಹುಟ್ಟಿದಾಗ ಮಾತ್ರ ಕೊಡಲ್ಪಟ್ಟಿದ್ದಾಗಿದೆ. ಮತ್ತಾ. 1:21 ರಲ್ಲಿ ಆಕೆಯು ಒಬ್ಬ ಮಗನನ್ನು ಹಡೆಯುವಳು ನೀನು ಅವನಿಗೆ ಯೇಸು ಎಂದು ಹೆಸರಿಡಬೇಕು. ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು ಅಂದನು. ಆತನ ಅನಾದಿ ಕಾಲದ ಹೆಸರಿನ ಕುರಿತು ಸತ್ಯವೇದ ಏನು ಹೇಳುತ್ತದೆ ಎಂದು ನೋಡೋಣ. ಆದಿಯಲ್ಲಿ ವಾಕ್ಯವಿತ್ತು ಆ ವಾಕ್ಯವು ದೇವರ ಬಳಿಯಲ್ಲಿತ್ತು ಆ ವಾಕ್ಯವು ದೇವರಾಗಿತ್ತು ಆ ವಾಕ್ಯವೆಂಬಾತನು ಆದಿಯಲ್ಲಿ ದೇವ ಬಳಿಯಲ್ಲಿದ್ದನು (ಯೋಹಾ. 1:1–2). "ಆ ವಾಕ್ಯವೆಂಬವನು ನರವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು" (ಯೋಹಾ. 1:14).

ಸತ್ಯವೇದವು ಯೇಸುವಿನ ಅನಾದಿ ಹೆಸರನ್ನು ಇಲ್ಲಿ ಪ್ರಕಟಪಡಿಸುತ್ತಾ ಇದೆ. ಅದು ವಾಕ್ಯವೆಂಬಾತನು ಎಂದು ಇಲ್ಲಿ ಮೇಲಿನ ವಾಕ್ಯದಲ್ಲಿ ಆ ವಾಕ್ಯವೆಂಬಾತನು ದೇವರ ಬಳಿಯಲ್ಲಿದ್ದನು. ದೇವರು ಬೇರೆ ವಾಕ್ಯ ಎಂದು ಗಮನಿಸಬಹುದು. ಆ ಮಹಿಮೆ ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ ತಂದೆ ಬೇರೆ, ಮಗ ಬೇರೆ ಎಂದು ಈ ವಾಕ್ಯದ ಮೂಲಕ ತಿಳಿಯಬಹುದು (ಯೋಹಾ. 1:14).

ಮತ್ತಾ. 28:19 ರಲ್ಲಿರುವ ತಂದೆ, ಮಗ, ಪವಿತ್ರಾತ್ಮನ ಕುರಿತು ಧ್ಯಾನಿಸೋಣ. ಯಾಕೆ ಯೇಸು ಈ ರೀತಿ ಹೇಳಿದನು. ಕರ್ತನಾದ ಯೇಸುಕ್ರಿಸ್ತನು ಆದಾಮನ ಮೂಲಕ ಮನುಷ್ಯನು ಕಳಕೊಂಡ ತಂದೆಯಾದ ದೇವರ ಅನ್ಯೋನ್ಯತೆಯನ್ನು ಪುನ: ಒದಗಿಸಿ ಕೊಟ್ಟನು. ಮನುಷ್ಯನ ಪಾಪದ ನಿಮಿತ್ತ ತಂದೆ ಮತ್ತು ಮಕ್ಕಳ ಸಂಬಂಧ ಅಲ್ಲಿ ಕಡಿದು ಹೋಗಿತ್ತು. ಆದಾಮ, ಹವ್ವರು ಪಾಪ ಮಾಡಿದಾಗ ದೇವರ ಸಾರೂಪ್ಯ ಮತ್ತು ಸಂಬಂಧವನ್ನು ಕಳಕೊಂಡರು. ಪುನ: ನಾವು ದೇವರಿಗೆ ಮಕ್ಕಳೆಂದು ಕರೆಸಿಕೊಳ್ಳ ಬೇಕಾದರೆ ತಂದೆ ಮತ್ತು ಮಕ್ಕಳ ಸಂಬಂಧ ಉಂಟಾಗಬೇಕು.

ಈ ಲೋಕದಲ್ಲಿ ಒಬ್ಬನು ತನ್ನ ತಂದೆಗೆ ಹುಟ್ಟದೇ ತಂದೆ ಎಂದು ಕರೆಯಲು ಸಾಧ್ಯವಿಲ್ಲ ಮತ್ತು ಅಲ್ಲಿ ತಂದೆ ಮತ್ತು ಮಗನ ಸಂಬಂಧ ಉಂಟಾಗುವುದಿಲ್ಲ. ಸತ್ಯವೇದ ಹೇಳುತ್ತದೆ, ಯಾರಾರು ಆತನನ್ನು (ಯೇಸುವನ್ನು) ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಇವರು ರಕ್ತ ಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷ ಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು" (ಯೋಹಾ. 1:12–13). ನಾವು ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಕರ್ತನಾದ ಯೇಸುಕ್ರಿಸ್ತನು ನಮ್ಮ ಪಾಪಗಳಿಗಾಗಿ ಶಿಲುಬೆಯಲ್ಲಿ ಸತ್ತು ಹೂಣಲ್ಪಟ್ಟು, ಮೂರನೆಯ ದಿನದಲ್ಲಿ ಎದ್ದು ಬಂದನೆಂದು ಹೃದಯದಲ್ಲಿ ನಂಬಿ ಬಾಯಲ್ಲಿ ಅರಿಕೆ ಮಾಡಿ ಕರ್ತನಾದ ಯೇಸುವನ್ನು ತನ್ನ ಜೀವಿತದಲ್ಲಿ ರಕ್ಷಕನು, ಒಡೆಯನು ಎಂದು ಅಂಗೀಕರಿಸುವಾಗ ನಾವು ದೇವರಲ್ಲಿ ಹುಟ್ಟುತ್ತೇವೆ ಇದು ಆತ್ಮ ಸಂಬಂಧವಾದ ಜನನವಾಗಿದೆ.

ಮೊದಲಿನ ಶರೀರದ ಸೃಷ್ಟಿಗೆ ಮೂಲ ತಂದೆ ಆದಾಮನಾಗಿದ್ದಾನೆ. ಕಡೆಯ ನೂತನ ಸೃಷ್ಟಿಗೆ (ಆತ್ಮಸಂಬಂಧವಾದ) ಕರ್ತನಾದ ಯೇಸುಕ್ರಿಸ್ತನು ಮೂಲ ತಂದೆಯಾಗಿದ್ದಾನೆ. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು

ನೀತಿ ನ್ಯಾಯಗಳು ನಿನ್ನ ಸಿಂಹಾಸನದ ಅಸ್ತಿವಾರವು; ನಿನ್ನ ಸಾನ್ನಿಧ್ಯದೂತರು ಪ್ರೀತಿಸತ್ಯತೆಗಳೇ (ಕೀರ್ತ. 89:14).

(1 ಕೊರಿ. 15:22).

ಮೇಲಿನ ವಚನಗಳಲ್ಲಿ ಆದಾಮನ ಸಂಬಂಧವು ಪ್ರತಿ ಮನುಷ್ಯ ಜಾತಿಗೆ ಮರಣವನ್ನು ತಂದಿತು ಎಂದು ತಿಳಿದುಕೊಳ್ಳುತ್ತೇವೆ. ಆದರೆ ಕ್ರಿಸ್ತನ ಸಂಬಂಧವು ಜೀವವನ್ನು ಕಂಡಿತು. ಆದಾಮನ ಸಂಬಂಧ ನಮಗೆ ರಕ್ತಗತವಾಗಿಯೂ ವಂಶಪಾರಂಪರ್ಯವಾಗಿ ಬಂದಿದೆ. ಆದರೆ ಕ್ರಿಸ್ತನ ಸಂಬಂಧ ಮಾನಸಾಂತರ ಪಟ್ಟು ಆತನನ್ನು ರಕ್ಷಕನು, ಒಡೆಯನೆಂದು ಅಂಗೀಕರಿಸುವಾಗ ಸಿಗುತ್ತದೆ.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2002781, 0091 9902334941**

---

## ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಉತ್ಸಾಹ ಧ್ವನಿಯನ್ನು ಕೇಳಿದ ಜನರು ಧನ್ಯರು; ಯೆಹೋವನೇ,
ಅವರು ನಿನ್ನ ಮುಖಪ್ರಕಾಶದಲ್ಲಿ ಸಂಚರಿಸುತ್ತಾರೆ (ಕೀರ್ತ. 89:15).

# ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು :–

ಕಾಪು ಜೇಸೀಸ್ ಸಂಸ್ಥೆಯ ನಿಕಟ ಪೂರ್ವಾಧ್ಯಕ್ಷ ಜೇಸಿ ರಾಕೇಶ್ ಕುಂಜೂರುರವರ ಜನ್ಮದಿನೋತ್ಸವದ ಪ್ರಯುಕ್ತ 'ವಿಶ್ವಾಸದಮನೆ'ಯ ಬಂಧುಗಳೊಂದಿಗೆ ಏರ್ಪಡಿಸಿದ ಸೌಹಾರ್ದ ಕೂಟದಲ್ಲಿ ಭಾಗವಹಿಸುವ ಅಪೂರ್ವ ಅವಕಾಶ ಸಿಕ್ಕಿತು. ಹಲವು ವರ್ಷಗಳಿಂದ ಮಾನವೀಯ ನೆಲೆಯಲ್ಲಿ ಪಾಸ್ಟರ್ ಸುನಿಲ್ ಡಿ'ಸೋಜಾ ಬಳಗದವರಿಂದ ಇಲ್ಲಿ ನಡೆಯುತ್ತಿರುವ ಸೇವೆ ನಿಜವಾದ ದೇವರ ಸೇವೆಯಾಗಿದೆ. ಮಾನವ ಧರ್ಮ ಅತ್ಯಂತ ಶ್ರೇಷ್ಠವಾದದ್ದು, ಅಶಕ್ತರ, ದುರ್ಬಲರ, ಮಾನಸಿಕ ಅಸ್ವಸ್ಥರ ಸೇವೆಯ ಮೂಲಕ ಜೀವನದಲ್ಲಿ ಸಂತೋಷ, ಸಂತೃಪ್ತಿ ಕಾಣುತ್ತಿರುವ "ವಿಶ್ವಾಸದಮನೆ"ಯ ಕಾರ್ಯಕರ್ತರ ಸೇವೆ ಶ್ಲಾಘನೀಯ. ಅವರ ಸೇವೆ ನಿರಂತರವಾಗಲಿ ಆ ದೇವರು ಅವರಿಗೆ ಸೇವಾ ಶಕ್ತಿಯನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಪುಂಡಲೀಕ ಮರಾಠೆ ಬಿ.** (ಪತ್ರಕರ್ತರು).

---

## ಡಿಜಿಎಮ್ ಬೇತೇಲ್ ಅಂಕಣ

- **ಕರ್ತನ ಕೃಪೆಯಿಂದ ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ 10 ಮಂದಿಯು ತಮ್ಮ ತಮ್ಮ ಕುಟುಂಬವನ್ನು ಸೇರಿರುತ್ತಾರೆ.**
- **11ನೇ ಕೆರೀತ್ ಕೂಟವು ಕರ್ತನ ಕೃಪೆಯಿಂದ ಒಳ್ಳೇ ರೀತಿಯಲ್ಲಿ ನಡೆಸಲ್ಪಟ್ಟಿತು, ಈ ಕೂಟದಲ್ಲಿ ಅನೇಕರು ಭಾಗವಹಿಸಿ ಕರ್ತನಿಂದ ಬಿಡುಗಡೆಯನ್ನು, ಸ್ವಸ್ಥತೆಯನ್ನು ಹೊಂದಿಕೊಂಡರು.**
- **ಪಾ॥ ಜಾನ್ ಸ್ಟೀಫನ್ ಮೊಂತೆರೋ ಹಾಗೂ ವಿನೆಟ್ ಪ್ರಿಯ ಮೊಂತೆರೋರವರಿಗೆ ಕರ್ತನು ದಯಪಾಲಿಸಿದ ಹೆಣ್ಣು ಮಗುವಿಗೆ ಎಲ್ಸಾ ಇವ್ಯಾಂಜಲೀನ್ ಮೊಂತೆರೋ ಎಂದು ಹಿರಿಯ ಸಭಾಪಾಲಕರಾದ ಪಾ॥ ಸುನಿಲ್ ಜಾನ್ ಡಿ'ಸೋಜಾರವರು ನಾಮಕರಣ ಮಾಡಿದರು.**
- **ಡಿಜಿಎಮ್ ಬೇತೇಲ್ ಚರ್ಚ್ ಕೊಳ್ಳೆಗಾಲ ಸಭೆಯ ಸಭಾಪಾಲಕರಾದ ಪಾ॥ ರೋನಾಲ್ಡ್ ಮಚಾದೋರವರಿಗೆ ದೇವರು ಸ್ವಂತ ಮನೆಯನ್ನು ಕಟ್ಟುವಂತೆ ಕೃಪೆ ತೋರಿಸಿದ್ದಾನೆ.**
- **ಪಾ॥ ಸುನಿಲ್ ಜಾನ್ ಡಿ'ಸೋಜಾರವರು ಒರಿಸ್ಸಾ ಮತ್ತು ಪಶ್ಚಿಮಬಂಗಾಳದಲ್ಲಿ ಸೇವೆಯನ್ನು ಮಾಡಿ ಬರುವಂತೆ ಕರ್ತನು ಕೃಪೆ ಕೊಟ್ಟಿದ್ದಾನೆ.**
- **ಸೆಪ್ಟಂಬರ್ 30ರಿಂದ ಅಕ್ಟೋಬರ್ 3ರವರೆಗೆ ಪ್ರೇಯರ್ ಪವರ್ ಕ್ಯಾಂಪ್ ಕೂಟವು ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಡುವದು.**
- **12ನೇ ಕೆರೀತ್ ಕೂಟವು ಅಕ್ಟೋಬರ್ 26ರಿಂದ ನವೆಂಬರ್ 4ರವರೆಗೆ ನಡೆಸಲ್ಪಡುವದು.**

# ಸಾಕ್ಷಿಯ ಸ್ವರ

ನಾನು ದುಷ್ಟಶಕ್ತಿಯ ಬಂಧನದಲ್ಲಿ ಕಟ್ಟಲ್ಪಟ್ಟಿದೆ, ಈ 10ನೇ ಕೆರೀತ್ ಕೂಟದಲ್ಲಿ ನನಗೆ ಇದರಿಂದ ದೇವರು ಸಂಪೂರ್ಣ ಬಿಡುಗಡೆ ಕೊಟ್ಟಿದ್ದಾನೆ ಹಾಗೂ ದೇವರ ವಾಕ್ಯದ ಮೂಲಕ ನನ್ನ ಜೊತೆ ಮಾತನಾಡಿದ್ದಾನೆ. ಕರ್ತನ ನಾಮಕ್ಕೆ ಸ್ತೋತ್ರವಾಗಲಿ. "ಆತನು [ದೂತನನ್ನೋ ಎಂಬಂತೆ] ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು" (ಕೀರ್ತ. 107:20).

**ಅಕ್ಕು, ಜಾವಳಿ.**

ನನ್ನ ಕೃಪೆಯು ಅವನಲ್ಲಿ ಶಾಶ್ವತವಾಗಿ ಇರುವದು;
ನನ್ನ ಒಡಂಬಡಿಕೆಯು ಅವನಲ್ಲಿ ಸ್ಥಿರವಾಗಿರುವದು (ಕೀರ್ತ. 89:28).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟ್ರರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ಅವನ ಸಂತಾನವನ್ನು ಯಾವಾಗಲೂ ಉಳಿಸುವೆನು.
ಅವನ ಸಿಂಹಾಸನವು ಆಕಾಶವಿರುವವರೆಗೂ ಇರುವದು (ಕೀರ್ತ. 89:29).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

2) **ಪರಿಶುದ್ಧಾತ್ಮನು ಕ್ರೈಸ್ತ ವಿಶ್ವಾಸಿಯ ಮೇಲೆ ಬರುತ್ತಾನೆ :–** ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರುಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು. (ಅ.ಕೃ. 1:8). ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವಿತದಲ್ಲಿ ಪರಿಶುದ್ಧಾತ್ಮನಿಂದ ಉಂಟಾಗುವ ಎರಡನೆಯ ಅನುಭವವೇ ಪರಿಶುದ್ಧಾತ್ಮನು ಆ ವ್ಯಕ್ತಿಯ ಮೇಲೆ ಬರುವಂತದ್ದದು. ಮೊದಲನೆ ಅನುಭವದಲ್ಲಿ ಪರಿಶುದ್ಧಾತ್ಮನು ಆ ವ್ಯಕ್ತಿಯ ಒಳಗಡೆ ಬಂದನು. ಎರಡನೆಯ ಅನುಭವದಲ್ಲಿ ಪರಿಶುದ್ಧಾತ್ಮನು ಆ ವ್ಯಕ್ತಿಯ ಮೇಲೆ ಬರುತ್ತಾನೆ.

ಪರಿಶುದ್ಧಾತ್ಮನು ಮೇಲೆ ಬರುವ ಅನುಭವಕ್ಕೆ ಸತ್ಯವೇದದಲ್ಲಿ ಅನೇಕ ಹೆಸರುಗಳನ್ನು ಕೊಡಲಾಗಿದೆ.

## ಮಹಿಳೆಯರ ಸ್ವರ

1. ಬೆಂಕಿಯ ಸ್ನಾನ (ಮತ್ತಾ. 3:11, ಲೂಕ. 3:16, ಅ.ಕೃ. 1:4–5).
2. ಪವಿತ್ರಾತ್ಮನ ಸ್ನಾನ (ಮತ್ತಾ. 3:11, ಮಾರ್ಕ. 1:8, ಲೂಕ. 3:16, ಅ.ಕೃ. 1:4–5).
3. ಪವಿತ್ರಾತ್ಮನ ವರ (ಲೂಕ. 11:13).
4. ಪವಿತ್ರಾತ್ಮನ ದಾನ (ಅ.ಕೃ. 2:38).
5. ಮೇಲಣ ಲೋಕದ ಶಕ್ತಿ (ಲೂಕ. 24:49).
6. ತಂದೆ ದೇವರ ವಾಗ್ದಾನ (ಲೂಕ. 24:49).
7. ಶಕ್ತಿಯ ಅಭಿಷೇಕ (ಅ.ಕೃ. 10:38).
8. ಬಲದ ಅಭಿಷೇಕ (ಅ.ಕೃ. 10:38).
9. ಪವಿತ್ರಾತ್ಮ ಭರಿತರಾಗುವದು (ಅ.ಕೃ. 2:4).
10. ಪವಿತ್ರಾತ್ಮ ಮೇಲೆ ಬರುವದು (ಅ.ಕೃ. 1:8).

3) **ಕ್ರೈಸ್ತ ವಿಶ್ವಾಸಿಯ ಅನುದಿನದ ಜೀವಿತದಲ್ಲಿ ಪವಿತ್ರಾತ್ಮನಿಂದ ಭರಿತನಾಗುತ್ತಾನೆ:** ಮೊದಲ ಎರಡು ಪವಿತ್ರಾತ್ಮನ ಅನುಭವಗಳು ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವಿತದಲ್ಲಿ ಒಂದೇ ಸಲ ನಡೆಯುತ್ತದೆ. ಪದೇ ಪದೇ ಪವಿತ್ರಾತ್ಮ ಒಳಗೆ ಬರಲ್ಲ, ಪದೇ ಪದೇ ವಿಶ್ವಾಸಿ ಪವಿತ್ರಾತ್ಮನ ಅಭಿಷೇಕ ಹೊಂದಲ್ಲ, ಮೂರನೆಯ ಅನುಭವ ಮೊಬೈಲ್ ಬ್ಯಾಟರಿ ರೀಚಾರ್ಜ್ ಮಾಡಿದ ಹಾಗೆ ನಾವು ಪ್ರಾರ್ಥಿಸುವಾಗ ಆರಾಧಿಸುವಾಗ ಪವಿತ್ರಾತ್ಮ ಭರಿತರಾಗುತ್ತಾ ಇರುತ್ತವೆ. (ಅ.ಕೃ. 4:29–31, 13:52, ಎಫೆ. 5:18). ಪರಿಶುದ್ಧಾತ್ಮ ಮೇಲೆ ಬರುವುದು ಅಥವಾ ಪರಿಶುದ್ಧಾತ್ಮನಲ್ಲಿ ಮುಳುಗಿಸಲ್ಪಡುವುದು ಒಂದೇ ಅರ್ಥವಾಗುತ್ತದೆ. ರಕ್ಷಣೆ ಹೊಂದಿದ ಒಬ್ಬ ವ್ಯಕ್ತಿ ಪರಿಶುದ್ಧಾತ್ಮನ ಎರಡನೆ ಅನುಭವದಲ್ಲಿ ಹೋಗುವುದು ಅತೀ ಪ್ರಾಮುಖ್ಯವಾಗಿದೆ.

ಪರಿಶುದ್ಧಾತ್ಮನು ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವಿತದಲ್ಲಿ ಸಾಕ್ಷಿಯಾಗಿ ಜೀವಿಸಲು ಪಾಪದ ಮೇಲೆ ಜಯ ಹೊಂದಲು ಬಲವನ್ನು ಅನುಗ್ರಹಿಸುತ್ತಾನೆ, ಮಾತ್ರವಲ್ಲದೆ ಪಾಪದ ಜೀವಿತದಿಂದ ಬಿಡುಗಡೆಗೊಳಿಸುತ್ತಾನೆ. ಅನುದಿನವೂ ಸರಿಯಾದ ಪರಿಶುದ್ಧವಾದ ಮಾರ್ಗದಲ್ಲಿ ನಡೆಯಲು ಪರಿಶುದ್ಧಾತ್ಮನು ಉಪದೇಶಿಸುತ್ತಾನೆ. ತಪ್ಪಾದ ಮಾರ್ಗದಲ್ಲಿ ಹೋಗುವಾಗ ಎಚ್ಚರಿಸುತ್ತಾನೆ. ನಮ್ಮ ಸ್ವಭಾವವನ್ನು ಯೇಸುಕ್ರಿಸ್ತನ ಸ್ವಭಾವದಂತೆ ಬದಲಾಯಿಸುತ್ತಾನೆ. ಪರಿಶುದ್ಧಾತ್ಮನು ನಮ್ಮೊಳಗಿದ್ದು ಕರ್ತನಾದ ಯೇಸುಕ್ರಿಸ್ತನನ್ನು ನಮ್ಮ ಮೂಲಕವಾಗಿ ಅನುದಿನವೂ ಮಹಿಮೆ ಸಲ್ಲಿಸುತ್ತಾನೆ ಹಾಗೂ ಯೇಸುಕ್ರಿಸ್ತನ ಕುರಿತು ಸಾಕ್ಷಿ ಹೇಳುತ್ತಾನೆ. ಮುಂದಿನ ಭವಿಷ್ಯದ ವಿಷಯಗಳನ್ನು ಪ್ರಕಟಿಸುತ್ತಾನೆ. ನಮ್ಮ ಬಲಹೀನತೆಯಲ್ಲಿ ನಮಗಾಗಿ ತಂದೆಯಾದ ದೇವರ ಬಳಿ ಪ್ರಾರ್ಥಿಸುತ್ತಾನೆ. ಪರಿಶುದ್ಧಾತ್ಮನು ನಮ್ಮಲ್ಲಿ ಆತ್ಮೀಕವಾದ ಫಲಗಳನ್ನು ಹಾಗೂ ವರಗಳನ್ನು ಉಂಟು ಮಾಡುತ್ತಾನೆ ಹಾಗೂ ಯೇಸುಕ್ರಿಸ್ತನ ಸ್ವಾರೂಪ್ಯಕ್ಕೆ ನಮ್ಮನ್ನು ನಡೆಸುತ್ತಾನೆ. ನಮ್ಮನ್ನು ಆತ್ಮೀಕ ಜ್ಞಾನದಿಂದ ತುಂಬಿಸಿ ದೇವರ ಮಹಿಮೆಗಾಗಿ ಉಪಯೋಗಿಸುತ್ತಾನೆ.

**ಪರಿಶುದ್ಧಾತ್ಮನು ಯಾರು ?**

1. **ಪರಿಶುದ್ಧಾತ್ಮನು ದೇವರಾಗಿದ್ದಾನೆ :–** ಅನೇಕರನ್ನು ದೇವರುಗಳೆಂದೂ ಕರ್ತನೆಂದು ಪೂಜಿಸುವುದುಂಟು ನಿಜವೇ ಆಕಾಶದಲ್ಲಿಯಾಗಲಿ ಭೂಮಿಯ ಮೇಲೆಯಾಗಲಿ ದೇವರುಗಳೆನಿಸಿಕೊಳ್ಳುವವರಿದ್ದಾರೆ ಆತನು ಸಮಸ್ತಕ್ಕೂ ಮೂಲಕಾರಣನು ನಾವು ಆತನಿಗಾಗಿ ಉಂಟಾದೆವು ಮತ್ತು ನಮಗೆ ಒಬ್ಬನೇ ಕರ್ತ ಆತನು ಯೇಸುಕ್ರಿಸ್ತನೇ ಆತನ

ಮುಖಾಂತರ ಸಮಸ್ತವೂ ಉಂಟಾಯಿತು. ನಾವೂ ಆತನ ಮುಖಾಂತರ ಉಂಟಾದೆವು (1 ಕೊರಿ. 8:5–6).

ಈ ಮೇಲಿನ ವಚನದ ಮೂಲಕ ನಾವು ತಿಳಿದುಕೊಳ್ಳುವುದೇನೆಂದರೆ ದೇವರುಗಳೆನಿಸಿಕೊಳ್ಳುವವರು ಅನೇಕರಿದ್ದರು ಅವರು ದೇವರುಗಳಲ್ಲ, ಇಂದಿನ ದಿನಗಳಲ್ಲಿ ಕ್ರಿಕೇಟ್ ತಾರೆಯರನ್ನು, ಸಿನಿಮಾ ತಾರೆಯರನ್ನು, ರಾಜಕಾರಿಣಿಯವರನ್ನು, ಅನೇಕ ಮನುಷ್ಯರನ್ನು ದೇವರೆಂದು ಕರೆಯುತ್ತಾರೆ. ಕೊನೆಗೆ ಆ ವ್ಯಕ್ತಿಗಳ ಬಣ್ಣ ಬಯಲಾದಾಗ ಅವರನ್ನು ದೇವರೆಂದು ಕರೆಯುವ ವ್ಯಕ್ತಿಗಳಿಗೆ ಏನು ಹೇಳುವುದೆಂದು ಅರ್ಥವಾಗುವುದಿಲ್ಲ, ದೇವರ ವಾಕ್ಯ ಹೇಳುತ್ತದೆ, ನಿಜ ದೇವರನ್ನು ನಾವು ಮೊದಲು ಅರಿತುಕೊಳ್ಳಬೇಕು ಮತ್ತು ಸೃಷ್ಟಿಕರ್ತನನ್ನು ಮಾತ್ರ ಆರಾಧಿಸಬೇಕು.

ದೇವರು ಎಂದು ದೇವರನ್ನು ಕರೆಯಬೇಕಾದರೆ ದೈವತ್ವದ ಗುಣ ಲಕ್ಷಣಗಳು ಅವಶ್ಯಕವಾಗಿ ಬೇಕು. ನಾವು ಕಳೆದ ಪುಟಗಳಲ್ಲಿ ದೇವರ ಬಗ್ಗೆ ಕಲಿತಿದ್ದೇವೆ. ಹಾಗೆಯೇ ತ್ರಯೇಕತ್ವದ ಮೂರನೆಯ ವ್ಯಕ್ತಿಯಾಗಿರುವ ಪರಿಶುದ್ಧಾತ್ಮನು ದೇವರಾಗಿರುವುದರಿಂದ ಆತನ ದೈವೀಕ ಸ್ವಭಾವಗಳನ್ನು ನಾವು ನೋಡೋಣ.

1. ಪರಿಶುದ್ಧಾತ್ಮನು ನಿರ್ಮಿಸುವ ಆತ್ಮನು (ಯೋಬ. 33:4).
2. ಪರಿಶುದ್ಧಾತ್ಮನು ಸರ್ವಶಕ್ತನು (ಲೂಕ. 1:35).
3. ಪರಿಶುದ್ಧಾತ್ಮನು ದೇವರು (2 ಕೊರಿ. 3:3, 3:7).
4. ಪರಿಶುದ್ಧಾತ್ಮನು ನಿತ್ಯಕ್ಕೂ ವಾಸಿಸುವವನು (ಇಬ್ರಿ. 9:14).
5. ಪರಿಶುದ್ಧಾತ್ಮನು ಸರ್ವವ್ಯಾಪಿ (ಕೀರ್ತ. 139:1–10).
6. ಪರಿಶುದ್ಧಾತ್ಮನು ಸರ್ವಜ್ಞಾನಿ (1 ಕೊರಿ. 2:10–14).
7. ಪರಿಶುದ್ಧಾತ್ಮನು ಸೃಷ್ಟಿಕರ್ತನಾಗಿದ್ದಾನೆ (ಆದಿ. 1:1–3).

**2) ಪರಿಶುದ್ಧಾತ್ಮನು ತ್ರಯೇಕತ್ವದ 3ನೆಯ ವ್ಯಕ್ತಿ** (ಮತ್ತಾ 28:20, ೨ಕೊರಿ, 13:14)

**3) ಪರಿಶುದ್ಧಾತ್ಮನು ಆತ್ಮಸ್ವರೂಪನಾಗಿದ್ದರೂ ವ್ಯಕ್ತಿತ್ವವುಳ್ಳವನು** ಯೋಹಾ. 16:7–15 ರಲ್ಲಿ ಪರಿಶುದ್ಧಾತ್ಮನ ಕುರಿತು 14 ಬಾರಿ ಪುರುಷಾರ್ಥಕ ಸರ್ವನಾಮವು ಉಪಯೋಗಿಸಲ್ಪಟ್ಟಿದೆ. ಉದಾಹರಣೆಗೆ ಪರಿಶುದ್ಧಾತ್ಮನು ದು:ಖಪಡುತ್ತಾನೆ (ಎಫೆ. 4:30). ಪರಿಶುದ್ಧಾತ್ಮನು ತನ್ನ ಚಿತ್ತದ ಪ್ರಕಾರ ವರಗಳನ್ನು ಹಂಚಿಕೊಡುತ್ತಾನೆ (1 ಕೊರಿ. 12:11).

"ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಆತನು ಬಂದು ಪಾಪ, ನೀತಿ, ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ಅವರು ನನ್ನನ್ನು ನಂಬದೆ ಇರುವುದರಿಂದ ಪಾಪದ ವಿಷಯದಲ್ಲಿಯೂ ನಾನು ತಂದೆಯ ಬಳಿಗೆ ಹೋಗಿ ಇನ್ನು ಮೇಲೆ ನಿಮಗೆ ಕಾಣಿಸದೆ ಇರುವುದರಿಂದ ನೀತಿಯ ವಿಷಯದಲ್ಲಿಯೂ ಇಹಲೋಕಾಧಿಪತಿಗೆ ನ್ಯಾಯತೀರ್ವಿಕೆಯಾದುದರಿಂದ ನ್ಯಾಯತೀರ್ವಿಕೆಯ ವಿಷಯದಲ್ಲಿಯೂ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು. ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೇ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವುದೆಲ್ಲಾ ನನ್ನದು; ಆದುದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು" (ಯೋಹಾ. 16:7–15).

**4) ಪರಿಶುದ್ಧಾತ್ಮನು ಕರ್ತನಾದ ಯೇಸುಕ್ರಿಸ್ತನ ವಾಗ್ದಾನವಾಗಿದ್ದಾನೆ** : (ಯೋಹಾ. 14:16–17, ಗಲಾ. 3:14). ಆದಕಾರಣ ಪರಿಶುದ್ಧಾತ್ಮನು ನಮ್ಮನ್ನು ಅನುದಿನದ ಜೀವಿತದಲ್ಲಿ ನಡಿಸುವಾಗ ನಾವು ಆತನಿಗೆ ಪರಿಪೂರ್ಣವಾಗಿ ಒಪ್ಪಿಸಿಕೊಡಬೇಕು. "ಅವರು ಶ್ರಮೆಪಡುತ್ತಿರುವಾಗೆಲ್ಲಾ ಆತನೂ ಶ್ರಮೆಪಟ್ಟನು; ಆತನ ಶ್ರೀಮುಖ ಸ್ವರೂಪದೂತನು ಅವರನ್ನು ರಕ್ಷಿಸಿದನು; ತನ್ನಲ್ಲಿನ ಮಮತೆಯಿಂದಲೂ ತಾಳ್ಮೆಯಿಂದಲೂ ಅವರನ್ನು ವಿಮೋಚಿಸಿ ಪುರಾತನ

ಕಾಲದಲ್ಲೆಲ್ಲಾ ಎತ್ತಿಕೊಂಡು ಹೊರುತ್ತಾ ಬಂದನು. ಅವರಾದರೋ ಎದುರುಬಿದ್ದು ಆತನ ಪವಿತ್ರಾತ್ಮನನ್ನು ದು:ಖಪಡಿಸಿದರು; ಆದುದರಿಂದ ಆತನು ಮಾರ್ಪಟ್ಟು ಅವರಿಗೆ ಶತ್ರುವಾಗಿ ತಾನೇ ಅವರೊಡನೆ ಹೋರಾಡಿದನು" (ಯೆಶಾ. 63:9–10).

**ಪವಿತ್ರಾತ್ಮನಿಗೆ ವಿರುದ್ಧವಾಗಿ ಮಾಡುವ ಪಾಪಗಳು :–**

1. ಪವಿತ್ರಾತ್ಮನಿಗೆ ಎದುರುಬೀಳುವುದು (ಯೆಶಾ. 63:10).
2. ಪವಿತ್ರಾತ್ಮನಿಗೆ ದು:ಖಪಡಿಸುವದು (ಯೆಶಾ. 63:10)
3. ಪವಿತ್ರಾತ್ಮನನ್ನು ವಂಚಿಸುವುದು (ಅ.ಕೃ. 5:3).
4. ಪವಿತ್ರಾತ್ಮನನ್ನು ಪರೀಕ್ಷಿಸುವದು (ಅ.ಕೃ. 5:9).
5. ಪವಿತ್ರಾತ್ಮನ ಕಾರ್ಯಗಳಿಗೆ ವಿರುದ್ಧ ಮಾತನಾಡುವದು (ಅ.ಕೃ. 2:13).
6. ಪವಿತ್ರಾತ್ಮನನ್ನು ನಂದಿಸುವುದು (1 ಥೆಸ. 5:19).
7. ದೇಹವನ್ನು ಮಲಿನಗೊಳಿಸುವುದು (1 ಕೊರಿ. 3:16–17, 6:11–20).
8. ಪವಿತ್ರಾತ್ಮನನ್ನು ದೂಷಿಸುವದು (ಮತ್ತಾ. 12:31).
9. ಪವಿತ್ರಾತ್ಮನಿಂದ ನಡಿಸಲ್ಪಡುವ ವ್ಯಕ್ತಿಗೆ ವಿರುದ್ಧವಾಗಿ ನಿಲ್ಲುವದು (ಅ.ಕೃ. 6:10, 2 ಪೂರ್ವ. 36:16).
10. ಪವಿತ್ರಾತ್ಮನನ್ನು ಎದುರಿಸುವುದು (ಅ.ಕೃ. 7:51).
11. ಪವಿತ್ರಾತ್ಮನ ಮಾರ್ಗದರ್ಶನ ನಿರಾಕರಿಸುವುದು (ಯೋನ. 1:1–3).
12. ಪವಿತ್ರಾತ್ಮನನ್ನು ತಿರಸ್ಕರಿಸುವುದು (ಇಬ್ರಿ. 10:29).

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

---


**ವಿಶೇಷ ಸೂಚನೆ**

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091–820 2002781, 0091–9902334941, 0091–9964070654, 0091–820 2559712.**




# ನಮ್ಮೊಂದಿಗೆ ಆಚರಿಸಿ





**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯುವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.



## ಮಕ್ಕಳ ಸ್ವರ

1. ವಕ್ರಮಾರ್ಗಿಯಾದ ಐಶ್ವರ್ಯವಂತನಿಗಿಂತ ಯಾರು ಶ್ರೇಷ್ಠನು? (ಜ್ಞಾನೋ. 28:6).
2. ಯಾರು ಕೇಡಿಗೆ ಸಿಕ್ಕಿಬೀಳುವನು ? (ಜ್ಞಾನೋ. 28:14).
3. ಯಾರಿಗೆ ಶುಭವಾಗದು? (ಜ್ಞಾನೋ. 28:13).
4. ಶಿಷ್ಟನು ಹೇಗೆ ಧೈರ್ಯದಿಂದಿರುವನು? (ಜ್ಞಾನೋ. 28:1).
5. ನಿನ್ನ ಪ್ರೇಮವು ಯಾವುದಕ್ಕಿಂತ ಎಷ್ಟೋ ಮೇಲು? (ಪರಮ. 4:10).
6. ನನ್ನ ನಲ್ಲನು ಯಾವ ಬಣ್ಣವುಳ್ಳವನು? (ಪರಮ. 5:10).
7. ದೇವದಾರುಗಳಷ್ಟು ರಮಣೀಯವಾದ ಅವನ ಗಾಂಭೀರ್ಯವು ಯಾವುದಕ್ಕೆ ಸಮಾನ? (ಪರಮ. 5:15).
8. ಪ್ರೀತಿಯು __________ ಬಲವಾಗಿದೆ ? (ಪರಮ. 8:6).
9. ನಿನ್ನ ಕೈಯಲ್ಲಿ, ನನನ್ನು ಏನಾಗಿ ಧರಿಸಿಕೋ? (ಪರಮ. 8:6).
10. ಯಾವುದರ ಹಾಗೆ ಮನೋಹರಿ? (ಪರಮ. 6:4).

**ಆಗಸ್ಟ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1. ಬೇತ್ಲೆಹೇಮ್
2. 12 ಮಂದಿ
3. ಸೀಮೋನ ಪೇತ್ರ
4. ಶಿಲುಬೆಯಲ್ಲಿ
5. ಜೋಯಿಸರು
6. ರೊಟ್ಟಿ ಮತ್ತು ಮೀನು
7. ಪರಲೋಕದಲ್ಲಿರುವ ನಮ್ಮ ತಂದೆಯೇ
8. ಫರಿಸಾಯರು
9. ಮರಿಯ
10. ಸತ್ತ ಲಾಜರನನ್ನು ಬದುಕಿಸಿದನು.

## ಬೇಕಾಗಿದ್ದಾರೆ

- **ಸ್ಟಾಫ್ ನರ್ಸ್ (ಜಿಎನ್‌ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)**
- **ಎಮ್‌ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**0091–9902334941, 0091–820 2002781.**

ಯೆಹೋವನಲ್ಲಿ ಭರವಸವಿಡುವವರು ಚೀಯೋನ್ ಪರ್ವತದ ಹಾಗೆ ಇದ್ದಾರೆ;
ಅದು ಕದಲುವದಿಲ್ಲ, ಸದಾ ಸ್ಥಿರವಾಗಿರುತ್ತದೆ (ಕೀರ್ತ. 125:1).